CC-O. In Public Domain. Digitized by eGangotri

ವಿದ್ಯಾರಾಧಕ

विद्याराधक

VIDYARADHAKA

ಡಾ। ಎ. ಪುಂಡಲೀಕ ಶೆಣ್ವಿ

1896-1976

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾರಾಧಕ

विद्याराधक

VIDYARADHAKA

Sri Vidyabharathi Book Centre, Sringeri

CC-O. In Public Domain. Digitized by eGangotri



1896 – 1976

Late Sri U. PUNDALIK SHENOY



1928 – 1994

Sri Vidyabharathi Book Centre, Sringeri

Late Sri U. PANDURANGA V. SHENOY

Founder

CC-O. In Public Domain. Digitized by eGangotri

ಅನುಕ್ರಮಣಿಕೆ

S. No.	Subject	Author	Page No.
1.	ಹಲವು ಮಕ್ಕಳ ತಂದೆ	ಶ್ರೀ ಕು. ಶಿ. ಹರಿದಾಸ ಭಟ್ಟ ಉಡುಪಿ	15
2.	ಪ್ರಾತಃಸ್ಮರಣೀಯ ಅಧ್ಯಾಪಕ	ಶ್ರೀ ಟಿ. ನಾರಾಯಣ ಎಂ. ಪೈ ಮಣಿಪಾಲ	20
3.	ನಿರಂತರ ಕಲಿತವರು, ಕಲಿಸಿದವರು	ಶ್ರೀ ಎನ್. ಶ್ರೀಶ ಬಲ್ಲಾಳ್ ಅಂಬಲಪಾಡಿ	25
4.	ವಿದ್ಯಾದಾನಕ್ಕಾಗಿ ತನ್ನನ್ನು ತಾನೇ ಸಮರ್ಪಿಸಿಕೊಂಡ ಉಡುಪಿಯ ಅಪೂರ್ವ ಶಿಕ್ಷಣ ತಪಸ್ವಿ	ಶ್ರೀ ಪ. ರಾಘವೇಂದ್ರ ಕುಡ್ವ ಉಡುಪಿ	30
5.	ವಿದ್ಯಾರಾಧಕ – ದಿವಂಗತ ಯು. ಪುಂಡಲೀಕ ಶೆಣೈ	ಶ್ರೀ ಕೆ. ರಮೇಶ ಅಚ್ಯುತ ಪೈ ಉಡುಪಿ	37
6.	Education	*Wise Sayings*	52
7.	Late Sri U. Pundalik Shenoy	*Sri M. M. Kini* *Bangalore*	54
8.	Late Sri U. Pundalik Shenoy	*Sri U. G. Shenoy* *Udupi*	59
9.	An old student and an old teacher of the school in one	*Late Sri U. Pundalik Shenoy, Udipi*	62
10.	Religious Education for Hindu Children	*Late Sri U. Pundalik Shenoy, Udipi*	74

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾರಾಧಕ

ಸಂಚಿಕೆ ಬಿಡುಗಡೆ	:	25 - 12 - 2000 (ಸೋಮವಾರ)
ಉದ್ಘಾಟಕರು	:	ಶ್ರೀ ಕೆ. ಕೆ. ಪೈ, ಮಣಿಪಾಲ.
ಉದ್ದೇಶ	:	ದಿ। ಯು. ಪುಂಡಲೀಕ ಶೆಣೈಯವರ 25ನೆಯ ಪುಣ್ಯತಿಥಿಯ ದಿವ್ಯಸ್ಮರಣಾರ್ಥ.
ಸ್ಥಳ	:	"ವಾಸುದೇವ ಸದನ", ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ, ಉಡುಪಿ.

ಹಕ್ಕುಗಳು ಕಾದಿರಿಸಲಾಗಿವೆ.

ಛಾಯಾಚಿತ್ರಗಳು	:	ಐಡಿಯಲ್ ಸ್ಟುಡಿಯೋ, ಉಡುಪಿ.
ಮುಖಪುಟ	:	ಶ್ರೀ ರಾಮಚಂದ್ರ ಭಟ್, ಬಿಳಗಿ.
ಮುದ್ರಕರು	:	ಮಣಿಪಾಲ ಪ್ರೆಸ್ ಲಿಮಿಟೆಡ್, ಮಣಿಪಾಲ.
ಸಂಪಾದಕರು/ಪ್ರಕಾಶಕರು	:	ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್ 1ನೇ ಮಹಡಿ, "ವಾಸುದೇವ ಸದನ" ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ ಉಡುಪಿ – 576 101

Sri Vidyabharathi Book Centre, Sringeri

CC-O. In Public Domain. Digitized by eGangotri

H. H. SHRIMAD SUDHINDRA THIRTHA SWAMI
SHREE KASHI MATH SAMSTHAN
VARANASI

Camp Walkeswar Sri Kashi Math Mumbai

In the name of Sri Narayana

Ref:

Date 3. 12. 2000.

Hearty blessings

To

The book - Vidyaradhaka - written on the well-honoured Late Sri K. Pundalik Shenoy who loved and worked for education throughout his life in a ever-memmorable way.

May the book inspire the love to work for education in the society and cause increase of literacy in the people, is sincerely prayed at the Lotusfeet of Sri Vyasa Raghupathi - ever worshipped by Our Samsthan.

Our best wishes for a bright future to all who worked for the good cause

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Shree Bhavanishankar Prasanna.

Shree Saunsthan Gaudpadacharya Kavle Math

Shree Kavle Math, Kavale, Ponda, Goa - 403 401

Tel. 0834 - 312049

[illegible]

[illegible]

[illegible] 13.11.2000 [illegible]

[illegible]

[illegible]

[illegible]

[illegible]

[illegible] 3.11.2000 [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

Form M/11 A

CC-0. In Public Domain. Digitized by eGangotri

श्रीमत्परमहंस परिव्राजकाचार्यवर्य पदवाक्य प्रमाण
पारावार पारीण यमनियमाद्यष्टाङ्ग योग संपन्न
श्रीमद्वैष्णवसिद्धान्त प्रतिष्ठापनाचार्य वर्य
श्रीमत्सकल सुरनिकर मुकुटमणिरंजित दिव्य
श्रीरामदेव वीरविठ्ठल चरणकमलसंततानुराधक
श्रीसंस्थान गोकर्ण पर्तगाळी जीवोत्तम मठाधीश
श्रीमत्कमलानाथतीर्थ श्रीपाद वडेर करकमलसंजात
श्रीमद्द्वारकानाथतीर्थ श्रीपाद वडेर वरकुमारक
श्रीमद्विद्याधिराजतीर्थ श्रीपाद वडेर यांनी

ಯು. ಹರೀಶ ಪಾಂಡುರಂಗ ಶೆಣೈ, (ಆಡಳಿತ ಮೊಕ್ತೇಸರ)
ಅತ್ಯಂತ ಪ್ರಿಯ ಶಿಷ್ಯವರ್ಗಾಂತರ್ಗತ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್, ಇವರಿಗೆ
ಉಡುಪಿ.

ಶ್ರೀಮನ್ನಾರಾಯಣ ಸ್ಮರಣಪೂರ್ವಕ ಆಶೀರ್ವಾದಗಳು.

ಅದ್ಯ ಶ್ರೀ ಶಕ ೧೯೨೨ ವಿಕ್ರಮನಾಮ ಸಂ। ಕಾರ್ತಿಕ ಶುಕ್ಲ ೧೪, ದಿ. 10-11-2000
ಪರ್ಯಂತ ಶ್ರೀ ಸಂಸ್ಥಾನದ ಮುಕ್ಕಾಮು ಶ್ರೀ ಪರ್ತಗಾಳಿ ಮಠದ
ಶ್ರೀ ರಾಮದೇವ ಶ್ರೀ ವೀರವಿಟ್ಠಲ ಸಾನ್ನಿಧ್ಯದಲ್ಲಿ ಇರುತ್ತಿದ್ದು ನೀವು ನಮ್ಮ ಯೋಗಕ್ಷೇಮವನ್ನರಿತು ನಿಮ್ಮ ಕಡೆಯ ಕ್ಷೇಮ ಸಮಾಚಾರಗಳ ಬಗ್ಗೆ ಬರೆಯುತ್ತಿರಬೇಕು.

ಸಾಂಪ್ರತ ಆಜ್ಞಾರಾಯಸ ಬರೆಯಲು ಕಾರಣವೇನೆಂದರೆ, ನಿಮ್ಮ ದಿನಾಂಕ 3-11-2000 ರ ವಿನಂತಿ ಪತ್ರ ತಲುಪಿ, ಅದರನ್ವಯ ದಿ|| ಯು. ಪುಂಡಲೀಕ ಶೆಣೈಯವರು ತಮ್ಮ ಜೀವನುದ್ದಕ್ಕೂ ಅಧ್ಯಾಪನ ವೃತ್ತಿಯ ಮೂಲಕ ಶಿಕ್ಷಣಾರ್ಥಿಗಳಿಗೆ ವಿದ್ಯಾರ್ಜನೆ ನೀಡಿದ್ದಲ್ಲದೇ ಇತರ ರೀತಿಯಲ್ಲೂ ಮಾರ್ಗದರ್ಶನ, ಧನಸಹಾಯವನ್ನಿತ್ತು ಪರಹಿತಕ್ಕಾಗಿ ಸಲ್ಲಿಸಿರುವ ಅಪ್ರತಿಮ ಸೇವೆಯಿಂದ ಸ್ಮರಣಯೋಗ್ಯರೆನಿಸಿದ್ದಾರೆ.

ಅವರ ಸೇವೆಯಿಂದ ಉಪಕೃತರಾದ ಅವರ ಶಿಷ್ಯವರ್ಗ ಹಾಗೂ ಅಭಿಮಾನಿಗಳಿಂದ ದಿ|| ಪುಂಡಲೀಕ ಶೆಣೈಯವರ ಆದರ್ಶ ಜೀವನದ ಮೌಲ್ಯಗಳ ಕುರಿತು ಕಿರುಪರಿಚಯವನ್ನೊದಗಿಸುವ ಹೊತ್ತಗೆಯೊಂದನ್ನು 'ವಿದ್ಯಾರಾಧಕ' ಎಂಬ ಹೆಸರಿನಲ್ಲಿ ಪ್ರಕಟಿಸಲು ನಿಶ್ಚಯಿಸಿದ ವಿಷಯವು ತಿಳಿದು ಚಿತ್ತಕ್ಕೆ ಬಹು ಸಂತೋಷವಾಗಿರುವುದು.

ಪ್ರಸ್ತುತ ಸ್ಮರಣ ಸಂಚಿಕೆಯು ಉತ್ತಮ ಲೇಖನಗಳ ಮೂಲಕ ಸಮಾಜಕ್ಕೆ ಸ್ಫೂರ್ತಿದಾಯಕವಾಗಲೆಂದೂ, ತನ್ಮೂಲಕ ಜನರಲ್ಲಿ ಸದಾಚಾರ, ಪರೋಪಕಾರಿ ಮನೋಭಾವ, ಹಾಗೂ ಸರಳ-ಸಾತ್ವಿಕ ಜೀವನಕ್ಕೆ ಪ್ರೇರಣೆ ದೊರೆಯುವಂತಾಗಲೆಂದೂ, ಶ್ರೀ ಸಂಸ್ಥಾನಾರಾಧ್ಯ "ಶ್ರೀ ರಾಮದೇವ - ವೀರವಿಠ್ಠಲ" ದೇವರ ಅಡಿದಾವರೆಗಳಲ್ಲಿ ಪ್ರಾರ್ಥಿಸಿ, ಶ್ರೀ ಮುಡಿ-ಗಂಧ ಪ್ರಸಾದ - ಮಂತ್ರಾಕ್ಷತೆಗಳನ್ನಿದರೊಂದಿಗೆ ರವಾನಿಸಲಾಗಿದೆ. ಸ್ವೀಕರಿಸಿ ಕೃತಾರ್ಥರಾಗುವುದು.

ನೀವು ರವಾನಿಸಿದ ಗುರುಕಾಣಿಕೆಯ ರಶೀದಿಯನ್ನು ಲಗ್ತು ಜೋಡಿಸಲಾಗಿದೆ.

ಇಂತಿ ಆಶೀರ್ವಾದಗಳು,

Sri Vidyabharathi Book Centre, Sringeri

(श्री रमण मुद्रणालय कुमटा)

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಶ್ರೀಯುತ ಪುಂಡಲೀಕ ಶೆಣೈಯವರು ಸ್ವರ್ಗಸ್ಥರಾಗಿ ಇಂದಿಗೆ 25 ವರುಷಗಳು ಸಂದಿವೆ. ತನ್ನ ಇಡೀ ಜೀವನವನ್ನು ವಿದ್ಯಾದಾನ ಹಾಗೂ ವಿದ್ಯಾರ್ಜನೆಗೆ ಮೀಸಲಾಗಿಟ್ಟು, ನಿಸ್ವಾರ್ಥತೆ, ಸರಳತೆ, ಪ್ರಾಮಾಣಿಕತೆ, ನಿಸ್ಪೃಹತೆ – ಇವೆಲ್ಲ ಸದ್ಗುಣಗಳನ್ನು ತನ್ನಲ್ಲಿ ತುಂಬಿಸಿಕೊಂಡು ನಿರ್ಭೀತಿಯಿಂದಲೂ, ನೆಮ್ಮದಿಯಿಂದಲೂ 80 ವರುಷಗಳ ಪರ್ಯಂತ ಯಾರ ಋಣಕ್ಕೂ ಬೀಳದೆ ಲೀಲಾಜಾಲವಾಗಿ ಇಹಲೋಕವನ್ನು ತ್ಯಜಿಸಿದ ಕೆಲವೇ ಮಹಾನುಭಾವರಲ್ಲಿ ಅವರು ಒಬ್ಬರು.

ಅಂಥಹ ಧೀಮಂತ ವ್ಯಕ್ತಿಯ ಗುಣಗಾನ ಮಾಡಿ, ಅವರು ಎತ್ತಿಹಿಡಿದ ಜೀವನ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಬದುಕು ಸಾರ್ಥಕವಾದೀತೆಂಬ ಹಿರಿದಾಸೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ಸುಸಂದರ್ಭದಲ್ಲಿ ಅವರ ಬಗ್ಗೆ ಅವರ ಶಿಷ್ಯ ವೃಂದದವರು, ಬಂಧುಗಳು, ಅಭಿಮಾನಿಗಳು ವ್ಯಕ್ತಪಡಿಸಿದ ಅನಿಸಿಕೆಗಳನ್ನು ಕ್ರೋಢೀಕರಿಸಿ ಈ "ವಿದ್ಯಾರಾಧಕ" ಎಂಬ ಕಿರುಹೊತ್ತಗೆಯನ್ನು ಸ್ಮರಣಿಕೆಯ ರೂಪದಲ್ಲಿ ಹೊರ ತರಲು ಆನಂದಪಡುತ್ತೇವೆ. ಇದನ್ನು ಉದ್ಘಾಟಿಸಲು ನಮಗೆ ಶ್ರೀ ಕೆ. ಕೆ. ಪೈಯವರಂತಹ ಮಹಾನ್ ವ್ಯಕ್ತಿಗಳು ಲಭ್ಯವಾದದ್ದು ನಮ್ಮ ಭಾಗ್ಯವೆಂದು ತಿಳಿಯುತ್ತೇವೆ.

ಕೇಳಿದ ಕೂಡಲೇ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿದ ಲೇಖಕರಿಗೆ, ಸಕಾಲದಲ್ಲಿ ಹಾಗೂ ಮನೋಹರವಾಗಿ ಮುದ್ರಿಸಿಕೊಟ್ಟ ಮಣಿಪಾಲ ಪ್ರೆಸ್ಸಿನ ಅಧಿಕಾರ ಮಂಡಳಿಗೆ, ಶ್ರೀಯುತ ಪುಂಡಲೀಕ ಶೆಣೈಯವರ ಕಾಲದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ತೆಗೆದು ಜೋಪಾನ ಮಾಡಿಟ್ಟ ಫೋಟೋಗಳನ್ನು ಕಳುಹಿಸಿಕೊಟ್ಟ ಐಡಿಯಲ್ ಸ್ಟುಡಿಯೋ ಮತ್ತು ಪ್ರತ್ಯಕ್ಷವಾಗಿ ಆಗಲಿ, ಪರೋಕ್ಷವಾಗಿ ಆಗಲಿ ಸಹಕರಿಸಿದ ಇತರ ಅನೇಕ ಬಂಧು, ಅಭಿಮಾನಿ ವರ್ಗಕ್ಕೂ ಕೂಡಾ ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್ ಆಭಾರ ಮನ್ನಣೆ ಸೂಚಿಸುತ್ತದೆ.

ಶ್ರೀಯುತ ಪುಂಡಲೀಕ ಶೆಣೈಯವರ ಆಶೀರ್ವಾದ ನಮ್ಮೆಲ್ಲರ ಮೇಲಿರಲಿ ಎಂದು ಪ್ರಾರ್ಥಿಸುತ್ತೇವೆ.

3 - 11 - 2000 ಆಡಳಿತ ಮಂಡಳಿ

ಉಡುಪಿ ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್

Sri Vidyabharathi Book Centre, Sringeri

CC-O. In Public Domain. Digitized by eGangotri

Guru and Sishya

Richard Schiffman, an Amercian writer, talks about the tussle between Sri Ramakrishna and Swami Vivekananda. He says that Swami Vivekananda was like a bull - a very poweful bull. Whom does he attack? Sri Ramakrishna, this frail man who seems to be very weak. What happens? Sri Ramakrishna gently grabs the bull by its horns, but by the mere touch of Sri Ramakrishhna's hands, the bull is overpowered. In the end he surrenders at the feet of Sri Ramakrishna. There is Sri Ramakrishna, that frail man on the one hand, and Swami Vivekananda, that strong man, strong like a bull, on the other. But that bull slowly - and gratefully - surrenders. The author says 'gratefully'. Swamiji is grateful that Sri Ramakrishna has conquered him, because by conquering him, Sri Ramakrishna has saved him.

- Richard Schiffman

WORSHIP OF GOD

Gist of all worship — to be pure and to do good to others. He who sees God in the poor, in the weak, and in the diseased, really worships God : and if he sees God only in the image, his worship is but preliminary. He who has served and helped one poor man, seeing God in him, without thinking of his caste, or creed, or race, or anything, with him God is more pleased than with the man who sees Him only in temples.'

From the address at the Rameswaram Temple, 1897

- Swami Vivekananda

Sri Vidyabharathi Book Centre, Sringeri

''ಸಮಾಜ ಕಲ್ಯಾಣವೇ ಉತ್ತಮ ಧರ್ಮ ಸಾಧನ''



ದಿವಂಗತ ಯು. ಪುಂಡಲೀಕ ಶೆಣ್ಯೆಯವರು ಸ್ವಸಮಾಜದ ಧರ್ಮಗುರುಗಳಾದ ಕೈವಲ್ಯ, ಗೋಕರ್ಣ ಹಾಗೂ ಕಾಶೀ ಮಠಾಧಿಪತಿಗಳ ದಿವ್ಯಸನ್ನಿಧಿಯಲ್ಲಿ ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಾಲಯದ ಧರ್ಮದರ್ಶಿಗಳ ಹಾಗೂ ಇತರ ಪ್ರತಿಷ್ಠಿತ ವ್ಯಕ್ತಿಗಳ ಜೊತೆಗೆ (ನಿಂತವರಲ್ಲಿ ಎಡದಿಂದ ಆರನೆಯವರು).

CC-O. In Public Domain. Digitized by eGangotri
Sri Vidyabharathi B

ಶ್ರೀ ಕಾಶೀಮಠಾಧೀಶ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಸನ್ಯಾಸಾಶ್ರಮ
ಸ್ವೀಕಾರದ ಮುನ್ನ ಜೋಗಪ್ಪ ಶೆಣೈ ಕುಟುಂಬದವರ ಜೊತೆಯಲ್ಲಿ



ಕುಳಿತವರು ಎಡದಿಂದ : ರಾಮದಾಸ ಜೋಗಪ್ಪ ಶೆಣೈ, ಪುಂಡಲೀಕ ಜೋಗಪ್ಪ ಶೆಣೈ, ವಾಸುದೇವ ಜೋಗಪ್ಪ ಶೆಣೈ, ಶ್ರೀ ಸದಾಶಿವ ಶೆಣೈ (ಕಾಶೀಮಠಾಧೀಶ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಪೂರ್ವಾಶ್ರಮದಲ್ಲಿ) ಸದಾಶಿವ ಶೆಣೈಯವರ ಸಂಬಂಧಿಕರು, ರಂಗಪ್ಪ ವೆಂಕಟೇಶ ಶೆಣೈ, ಉಮಾನಾಥ ವೆಂಕಟೇಶ ಶೆಣೈ.

ನಿಂತವರು ಎಡದಿಂದ : ವಿಜಯನಾಥ ವಾಸುದೇಶ ಶೆಣೈ, ರತ್ನಾಕರ ವೆಂಕಟೇಶ ಶೆಣೈ, ಪಾಂಡುರಂಗ ವಾಸುದೇವ ಶೆಣೈ, ಆನಂದರಾಯ ವೆಂಕಟೇಶ ಶೆಣೈ, ಶಾಂತಾರಾಮ ವೆಂಕಟೇಶ ಶೆಣೈ.

CC-O. In Public Domain. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri

ಹಲವು ಮಕ್ಕಳ ತಂದೆ

– ಪ್ರೊ। ಕು. ಶಿ. ಹರಿದಾಸ ಭಟ್ಟ, ಉಡುಪಿ

ಆಜನ್ಮ ಬ್ರಹ್ಮಚಾರಿಯಾಗಿದ್ದರೂ ಹಲವು ಮಕ್ಕಳ ತಂದೆ ಎನಿಸಿದ ಪುಂಡಲೀಕ ಶೆಣೈ ಅವರು 21-12-1976ರಂದು ನಿಧನರಾದರು – ಮಾಗಿದ 80ನೆಯ ವಯಸ್ಸಿನಲ್ಲಿ. ವಯಸ್ಸು 80 ಆದರೂ ವೃದ್ಧಾಪ್ಯ ಅವರನ್ನು ಸೋಕಲಿಲ್ಲ-ಸ್ವಕರ್ತವ್ಯವನ್ನು ತಾನೇ ಮಾಡಿಕೊಳ್ಳುತ್ತಾ ಯಾರ ಸೇವೆಯನ್ನೂ ಬಯಸದೆ, ಹಾಸುಗೆ ಹಿಡಿಯದೆ, ನೋಯದೆ ನರಳದೆ, ಒಬ್ಬ ಪುಣ್ಯಜೀವಿ ಎಂಥ ಮರಣವನ್ನು ಬಯಸಬೇಕೋ ಅಂಥದೇ ಮರಣವನ್ನು ಅಪ್ಪಿದರು. ಜೀವನ ವಿನಾದೈನ್ಯೇನ, ಮರಣ ನಿರಾಯಾಸೇನ-ಅಪೇಕ್ಷೆ ಇದ್ದರೂ ಹಲವರಿಗೆ ಎಟುಕದ ರೀತಿಯಲ್ಲಿ ಹೇಗೆ ಬದುಕಿದರೋ ಅಷ್ಟೇ ಸಲೀಸಾಗಿ, ನಿಸ್ಪೃಹವಾಗಿ, ಯಾರಿಗೂ ತೊಂದರೆ ಕೊಡದೆ ಹೃದಯ ಸ್ತಂಭನದಿಂದಾಗಿ ಕೊನೆಯುಸಿರೆಳೆದರು.

* * *

ಶೆಣೈಯವರ ಹೃದಯ ಸಾಮಾನ್ಯ ಹೃದಯವಾಗಿರಲಿಲ್ಲ. ಅದು ಬರೇ ತನ್ನ ಐದೂವರೆ ಅಡಿ ಶರೀರದ ರಕ್ತ ಸಂಚಾರದ ಸಲುವಾಗಿ ಬಡಿಯುತ್ತಿರಲಿಲ್ಲ, ಮಿಡಿಯುತ್ತಿರಲಿಲ್ಲ, ತುಡಿಯುತ್ತಿರಲಿಲ್ಲ. ಬಡ ಕುಟುಂಬದಲ್ಲಿ ಹುಟ್ಟಿ ಬಡತನದ ಕಷ್ಟ ಕಾರ್ಪಣ್ಯಗಳನ್ನು ಎಳವೆಯಲ್ಲುಂಡು ಅದರ ನಡುವೆ ಶಿಕ್ಷಣ ಸಾಗಿಸಿದ ಶೆಣೈ ಜೀವನವನ್ನು ಬಡವರ ಸೇವೆಗೆ ಮುಡಿಪಾಗಿಟ್ಟರು. ಬದುಕಿನ ಅಪರಭಾಗದಲ್ಲಿ ಶ್ರೀಮಂತರಿಗೆ ಹೆಗಲೆಣೆಯಾಗಿ ವ್ಯವಹರಿಸುತ್ತಿದ್ದ ಶೆಣೈ ಅವರು ಹೂಡಿದ ಬಂಡವಾಳದ ಎಲ್ಲ ಪ್ರಯೋಜನ ಬಡ ವಿದ್ಯಾರ್ಥಿಗಳಿಗೆ, ತಾನು ಕಲಿಸಿದ ಸಂಸ್ಥೆಗೆ, ಸ್ವಭಾಂಧವರಲ್ಲಿ ಇನ್ನೂ ಆರ್ಥಿಕವಾಗಿ ಹಿಂದುಳಿದವರಿಗೆ. ಹೈಸ್ಕೂಲ್ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದ ಒಬ್ಬ ವ್ಯಕ್ತಿ ಆರ್ಥಿಕವಾಗಿಯೂ ಲೋಕೋಪಕಾರ ಮಾಡಿದ ಉದಾಹರಣೆ ವಿರಳ. ಇದು ಸಾಧ್ಯವಾದದ್ದು ಶೆಣೈ ಅವರ ಸರಳ ಜೀವನ, ಪರದುಃಖ ಕಾತರತೆಗಳಿಂದ; ಅವರ ಅರ್ಧಶತಮಾನ ಕಾಲದ ಶಿಸ್ತುಬದ್ಧ ನಿಷ್ಠಾವಂತ ಜೀವನ ಕ್ರಮದಿಂದ. ಉಪಕೃತರು ನೂರಾರು ಸಂಖ್ಯೆಯಲ್ಲಿ ಬಂದು ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸಿದರು; ಉಳಿದ ಸಾವಿರಾರು ಸುದ್ದಿ ಕೇಳಿ ಅರ್ಪಿಸತಕ್ಕವರು, ಕಣ್ಣಿಗೆ ಕಾಣಿಸದವರು, ಪರವೂರಿನಲ್ಲಿ ನೆಲಸಿದವರು. ಎಲ್ಲರಿಗೂ ಪುಂಡಲೀಕ ಶೆಣೈ ಅವರ ಮರಣ ಒಂದು ಪುಣ್ಯಸ್ಮರಣ.

* * *

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದೋ ಮುಹೂರ್ತದಲ್ಲಿ ಶೆಣೈ ಅವರು ಬ್ರಹ್ಮಚಾರಿಯಾಗಿ ಉಳಿಯುವ ನಿರ್ಧಾರ ಮಾಡಿದರು; ತೀರ ಆಪ್ತರಿಗೆ ಅವರು ಇದಕ್ಕೆ ಕಾರಣ ಹೇಳಿದ್ದೂ ಇದೆ; ಯಾರಾದರೂ ತರುಣರು ನಾವು ನಿಮ್ಮಂತೆ ಆಗಲೇ ಎಂದರೆ ಬೇಡ ಎಂದದ್ದೂ ಇದೆ. ಮದುವೆ ಮಾಡಿಕೊಳ್ಳದಿದ್ದರೂ ಇಷ್ಟೊಂದು ಮಾನಸ ಪುತ್ರ-ಪುತ್ರಿಯರನ್ನು ಪಡೆಯುವ ಭಾಗ್ಯ ಶೆಣೈ ಅವರಿಗೆ ಲಭಿಸಿತು. ಇದು ಉಪಾಧ್ಯಾಯ ವೃತ್ತಿಗೆ ಸಾಮಾನ್ಯವಲ್ಲವೆ ಎಂದು ನೀವು ಕೇಳಬಹುದು. ಶೆಣೈ ಅವರಿಗಾಗಿ ಅವರ ಶಿಷ್ಯರು ಮರುಗಿದಂತೆ ಸ್ವಂತ ಮಕ್ಕಳು ಅತ್ತಾರೇ ಎಂಬ ಸಂಶಯ ನನಗೆ! ಸಂಪ್ರದಾಯ ಪಾಲನೆಗೋಸ್ಕರ ಅತ್ತರೆ ಎಷ್ಟು ಅತ್ತಾರು? ಶೆಣೈ ಅವರು ಬರಿಯ ಲೆಕ್ಕದ ಪಾಠ, ಲೆಕ್ಕಾಚಾರದ ಪಾಠ ಮಾಡಿ ಮುಗಿಸಿದವರಲ್ಲ; ಕ್ರಿಶ್ಚನ್ ಹೈಸ್ಕೂಲಿನಿಂದ ನಿವೃತ್ತರಾದ ಮೇಲೂ ಅವರ ಪಾಠ ಮುಗಿಯಲಿಲ್ಲ; ಕೇಳಿದವನಿಗೆ ವಿದ್ಯಾದಾನ, ಶೆಣೈ ಇದ್ದಲ್ಲೊಂದು 'ಕ್ರಿಶ್ಚನ್' ಶಾಲೆ, ಅವರ ಆದರ್ಶಗಳು ಕ್ರಿಶ್ಚನ್ ಆದರ್ಶಗಳು ಆಗಿದ್ದವು ಎಂದರೆ ಯಾರೂ ಆಶ್ಚರ್ಯಪಡಬೇಕಾದದ್ದಿಲ್ಲ. ಕ್ರಿಶ್ಚಿನ್ ಸಂಸ್ಥೆಗಳ ಲೋಕೋಪಕಾರ ಭಕ್ತಿ ಶಕ್ತಿಯುಕ್ತಿಗಳನ್ನು ಇತ್ತೀಚೆಗೆ ತಾನೇ ಉಳಿದವರು ಅರಗಿಸಿಕೊಳ್ಳುತ್ತಿದ್ದಾರೆ. ದುರ್ಬಲರ ದುಃಖಕ್ಕೆ ಈ ಸಂಸ್ಥೆಗಳು ಒದಗಿದಂತೆ ಉಳಿದವು ಒದಗಲಿಲ್ಲ ಎಂಬುದು ಟೀಕೆಯಲ್ಲ, ವಸ್ತುಸ್ಥಿತಿ-ಅಂದಿಗೂ, ಇಂದಿಗೂ.

* * *

'ಪರೋಪಕಾರಾರ್ಥಮಿದಂ ಶರೀರಂ' ಎಂದು ಮಹಾಭಾರತದಲ್ಲಿ ಹೇಳಿದೆಯಂತೆ. ಇಂದಿನ ಅಲ್ಪಭಾರತದಲ್ಲಿ 'ಸ್ವಂತೋಪಕಾರಾರ್ಥಮಿದಂ ಶರೀರಂ' ಎಂದು ತಿದ್ದುಪಡಿ ಹೇಗೋ ಸೇರಿಕೊಂಡುಬಿಟ್ಟಿದೆ. 'ಇದಂ' ಜತೆಗೆ ಬೇರಾವುದಾದರೂ ಸುಲಭದಲ್ಲಿ ಸಿಕ್ಕಿದರೆ 'ಅದಂ' ಶರೀರಂ ಕೂಡ ಸ್ವಂತೋಪಕಾರಕ್ಕಾಗಿಯೇ ಬಳಸತಕ್ಕದ್ದು. ಅಭಿವೃದ್ಧಿಶೀಲ, ಪ್ರಗತಿಮುಖವಾದ ಒಂದು ಅರ್ವಾಚೀನ ಸನ್ನಿವೇಶದಲ್ಲಿ ಶೆಣೈ ಎತ್ತಿ ಹಿಡಿದು, ಅನುಷ್ಠಾನಕ್ಕೆ ತಂದು, ನಿತ್ಯವೂ ಆಚರಿಸಿದ ಮೌಲ್ಯ ಭಾರತದ ಪರಂಪರೆಗೇ ಸೇರಿದ್ದು-ಆದರೆ ಬದುಕಿನಿಂದ ಮರೆಯಾಗುತ್ತಿರುವ ಈ ಅವ್ಯಾವಹಾರಿಕ, ''ಹುಚ್ಚು'' ಮೌಲ್ಯಗಳಿಗೆ ಜೋತು ಬೀಳುವ ಮಂದಿ ತೀರ ಕಡಮೆ ಆಗುತ್ತಿದ್ದಾರೆ ಎಂದು ನಾನು ಬರೆದದ್ದನ್ನು ಶೆಣೈ ಓದಿದರೆ ಆಕ್ಷೇಪಿಸುತ್ತಿದ್ದರು; ಅದು 'ಕಡಮೆ' ಅಲ್ಲ, 'ಕಡಿಮೆ' ಎಂದು ತಿದ್ದುತ್ತಿದ್ದರು. ಅಂಗಡಿಯ ಜಾಹೀರಾತು, ನಾಟಕ ನೋಟೀಸು, ಪತ್ರಿಕೆಯ ಪುಟ, ಪಠ್ಯಪುಸ್ತಕದ ಪಾಠ-ಯಾವುದನ್ನೇ ಆಗಲಿ ಭಾಷಾ ನೈರ್ಮಲ್ಯದ ದೃಷ್ಟಿಯಿಂದ ತಿದ್ದದೆ ಬಿಟ್ಟವರಲ್ಲ- ಕೊನೆಯುಸಿರೆಳೆವವರೆಗೂ. ಶೆಣೈ ಅವರು ಪ್ರಬಂಧ 'ತಿದ್ದಿದರೆಂದರೆ ಕಲಿಯುಗ ದ್ವಾಪರವಾಗುವುದು'. ಹುಡುಗರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಬಂಧ ಒಂದು ಪುಟವಾದರೆ ಮುಂದಿನ ಮೂರು ಪುಟ ಶೆಣ್ಯೆ ಅವರ ರಕ್ತವರ್ಣ ಶಾಯಿಯ ಪುಟಗಳು. ಹುಡುಗರು ಮಾಡಿದ ಭಾಷಾಪರಾಧವನ್ನು ಒಂದಿಷ್ಟು ಕ್ಷಮಿಸದೆ ವಿಸ್ತಾರವಾಗಿ ಪ್ರತಿ ಪ್ರಬಂಧವನ್ನು ತಿದ್ದಬೇಕು – ತಿದ್ದಿ ಮತ್ತೆ ಅದನ್ನು ವಿದ್ಯಾರ್ಥಿಗೆ ಹೇಳಬೇಕು-ಇದು ಶೆಣ್ಯೆ ಅವರ ವ್ರತ.

* * *

ಇಂಥ ಕಟ್ಟುನಿಟ್ಟಾದ ವ್ರತವನ್ನು ಶೆಣ್ಯೆ ಅವರು ತಮ್ಮ ವೃತ್ತಿ ಜೀವನದಲ್ಲೂ, ನಿವೃತ್ತಿ ಜೀವನದಲ್ಲೂ ಏಕರೀತಿಯಾಗಿ ಪಾಲಿಸಿದರು. ಗಣಿತ ಮತ್ತು ಇಂಗ್ಲಿಷ್ ಪ್ರಾಧ್ಯಾಪಕ ಶೆಣ್ಯೆ ಅವರನ್ನು ಒಂದು ತಲೆಮಾರಿನ ಕ್ರಿಶ್ಚಿನ್ ಹೈಸ್ಕೂಲ್ ವಿದ್ಯಾರ್ಥಿಗಳು ಬಲ್ಲರು. ಅಲ್ಲಿಂದ ನಿವೃತ್ತರಾದ ಬಳಿಕವೂ ಸುಮಾರು 30 ವರ್ಷಗಳ ಕಾಲ ಶೆಣ್ಯೆ ಅದೇ ವ್ರತವನ್ನು ನಡೆಸಿದರು. ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಗಳಲ್ಲಿ ದುರ್ಬಲ ವಿದ್ಯಾರ್ಥಿಗಳಿಗೆ ಭಯಂಕರ ವಿಷಯಗಳೆನಿಸಿದ ಗಣಿತ, ಇಂಗ್ಲಿಷ್ ಎರಡಕ್ಕೂ ಶೆಣ್ಯೆ ಅವರೇ ಉಡುಪಿಯ ಮಟ್ಟಿಗೆ ಮುಖ್ಯ ಭಯತ್ರಾತರು. ಅವರ ಹತ್ತಿರ ನಾಲ್ಕು ಪಾಠ ಹೇಳಿಸಿಕೊಂಡರೂ ಪಾಸಾಗಬಹುದೆಂಬ ಕೀರ್ತಿಯೇ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಮೂಡಿಸುತ್ತಿತ್ತು. ಪರೀಕ್ಷಾ ಫಲಿತಾಂಶ ಬಂದಾಗ 'ನಾನು ಪಾಸ್ ಸಾರ್' ಎಂಬಂಥ ಮೂರು ಶಬ್ದಗಳು ಶೆಣ್ಯೆ ಅವರಿಗೆ ಔರಸಪುತ್ರ ಐ. ಎ. ಎಸ್. ಆದಷ್ಟು ಸಂತೋಷ ವನ್ನು ತಂದುಕೊಡುತ್ತಿದ್ದವು.

* * *

ಶೆಣ್ಯೆ ನಿಜವಾದ ಅರ್ಥದಲ್ಲಿ ಬ್ರಹ್ಮಚಾರಿ – ಅವರು ಉಪಾಧ್ಯಾಯರು ಹೇಗೋ ಹಾಗೆ ವಿದ್ಯಾರ್ಥಿಯೂ ಆಗಿದ್ದರು. ತನಗೆ ತಿಳಿಯದ್ದನ್ನು ಕೇಳಿ ತಿಳಿಯುವ ಹಂಬಲ ಅವರದು. ಆಸಕ್ತ ವಿಷಯಗಳಲ್ಲಿನ ವಿವರಗಳ ಬಗ್ಗೆ ಅವರ ಸಂಶಯ ಮುಗಿದದ್ದೇ ಇಲ್ಲ; ಬೀದಿಯಲ್ಲೂ ಅದರದೇ ಜ್ಞಾನ; ಫಕ್ಕನೆ ನೀವು ಸಿಕ್ಕರೆ ನಿಮಗೊಂದು ಪ್ರಶ್ನೆ ಎಸೆದರೂ ಸೈ. ಇಂಗ್ಲಿಷಿನಲ್ಲಿ ಭಾಷೆಗೆ, ಪದಗಳಿಗೆ ಒಂದು ನಿರ್ಧಾರಿತ, ನಿಷ್ಕೃಷ್ಟ ರೂಪ ಇರುವಂತೆ ಕನ್ನಡಕ್ಕೂ ಯಾತಕ್ಕಿರಬಾರದು ಎಂದು ವಿದ್ವಾಂಸರ ಹತ್ತಿರ ಬಹುಕಾಲ ಜಿಜ್ಞಾಸೆ ನಡೆಸಿ ತಮ್ಮ ಶಿಷ್ಯನಾದ ಪ್ರೊ। ಎಂ. ರಾಜಗೋಪಾಲಾಚಾರ್ಯರಿಂದ 'ಕನ್ನಡ ವಾಗ್ರೂಢಿಗಳು' ಎಂಬ ಗ್ರಂಥವನ್ನು ಬರೆಸಿದವರು, ಅದನ್ನು ಪ್ರಕಟಿಸಿದವರು ಶೆಣ್ಯೆ ಅವರು. 'ಒಬ್ಬೊಬ್ಬರು ಒಂದೊಂದು ಬರೆದರೆ ಎಲ್ಲರಿಗೂ ಗೊತ್ತಾಗುವುದು ಹೇಗಯ್ಯಾ?' ಎಂಬ ಪ್ರಶ್ನೆಯಲ್ಲಿ ಶೆಣ್ಯೆ ಅವರ ಕಳಕಳಿ ಮತ್ತು ಉಪಾಧ್ಯಾಯತನ ಸ್ಫುಟವಾಗುತ್ತಿತ್ತು. ಭಾಷೆ ಒಂದು ಪವಿತ್ರ ವಸ್ತು – ಅದನ್ನು ಬೇಕಾದಂತೆ ಹಿಸುಕಿ ಮಲಿನಗೊಳಿಸಬಾರದು – ಎಂಬ ಮಡಿವಂತಿಕೆಯ ಗುಂಪಿಗೆ ಸೇರಿದವರು ಅವರು.

* * *

Sri Vidyabharathi Book Centre, Sringeri

CC-O. In Public Domain. Digitized by eGangotri
ಇದೇ ಮಡಿವಂತಿಕೆ ಅವರನ್ನು ಸಿನಿಮಾ ನೋಡುವುದಕ್ಕೆ ನಿರ್ಬಂಧಿಸಲಿಲ್ಲ ಎಂಬುದೊಂದು ಸೋಜಿಗ. ಅವರು ರಾಮನ ಮತಕ್ಕಾಗಲಿ, ಕೃಷ್ಣನ ಮತಕ್ಕಾಗಲೀ ಸೇರದಿರುವ ಬ್ರಹ್ಮಚಾರಿಯಾದದ್ದರಿಂದ ಶೆಣೈ ಅವರು ಧಾರಾಳವಾಗಿ ಸಿನಿಮಾ ನೋಡಿದರು. ನೋಡಿದ್ದನ್ನೆಲ್ಲ ಮೆಚ್ಚುವ ಉದಾರ ಪಂಥಕ್ಕೆ ಸೇರಿದರು. ಸಿನಿಮಾ – ನಾಟಕಗಳು ಶೆಣೈ ಅವರ ಎರಡನೇ ಹುಚ್ಚು – ಗಣಿತ ಮತ್ತು ಭಾಷಾಶಾಸ್ತ್ರ ಒಂದನೆಯದು ಎಂದಿರಿಸಿಕೊಂಡಲ್ಲಿ ಸಿನಿಮಾ ನೋಡಲು ಕನಿಷ್ಠ ಬೆಲೆ ಎರಡಾಣೆ ಇದ್ದಾಗ ಅವರಂದ ಮಾತು ಈಗಲೂ ನೆನಪಿದೆ. 'ಎಂಥದು ಸ್ವಾಮೀ ಎರಡಾಣೆಗೆ, ಎರಡೇ ಆಣೆಗೆ ಎಷ್ಟು ದೃಶ್ಯ, ಎಷ್ಟು ಸಂಗೀತ, ಎಷ್ಟು ವಿನೋದ ?' ಎಂಬಂಥ ಬಾಲಭಾವದ ಹಿಂದೆಯೂ ಕೇವಲ ಎರಡಾಣೆ ಪ್ರಭುಗಳಿಗೂ ಇಷ್ಟೊಂದು ಮನರಂಜನೆ ಸಿಗುವ ಏರ್ಪಾಟನ್ನು 20-25 ಅಂಶದ ಕಾರ್ಯಕ್ರಮಕ್ಕೆ ಮೊದಲೇ ಶೆಣೈ ಮೆಚ್ಚಿಕೊಂಡಿದ್ದರೆಂದು ಅರ್ಥವಾಗುತ್ತದೆ. ನಾಟಕಗಳೂ ಶೆಣೈ ಅವರಿಗೆ ಪ್ರಿಯವಾದ ಒಂದು ಮನರಂಜನ ಮಾಧ್ಯಮ. ಶಾಲೆಯಲ್ಲಿ ನಾಟಕ ಆಡಿಸುವಲ್ಲಿ ಶೆಣೈ ಅವರು ಪ್ರಾಮ್ಟರ್ ಆಗಿ ಕೆಲಸ ಮಾಡುತ್ತಿದ್ದುದು ನನಗೆ ನೆನಪಿಗೆ ಬರುತ್ತದೆ; ಅಲ್ಲಿಯೂ ಶೆಣೈ ಅವರದೇ ಶಿಸ್ತು, ನಾಟಕ ನಡೆಯುತ್ತಿದ್ದಾಗ ಸೈಡ್‌ವಿಂಗ್ಸ್‌ನಿಂದ ಇಡೀ ನಾಟಕ ಇಳಿದನಿಯಲ್ಲಿ ಓದಬೇಕು, ಅಂದರೇನೇ ತಪ್ಪಿದಾಗ ನಟನನ್ನು ಎಚ್ಚರಿಸಬಹುದು ಎಂಬ ನಿಷ್ಠಾವಂತರು ಅವರು. ತಪ್ಪಿದಾಗ ಮಾತ್ರ ಓದುವುದಲ್ಲ. ನೆನಪಿರಲಿ. ಉಡುಪಿಯ ಮುಖ್ಯ ನಾಟಕ ಸಂಘ ರಂಗಭೂಮಿಗೂ ಅವರೇ ಆಧಾರಸ್ತಂಭ. ಸಂಗೀತ ಸಭೆ ಹತ್ತು ವರ್ಷ ಹಿಂದೆ ಯಾವುದೋ ಒಂದು ನಾಟಕ ಸಂಸ್ಥೆ ಕರೆಸಲು ಮುಂಗಡ ತೆರುವ ಪ್ರಸಂಗ ಬಂದಾಗ ಸಾವಿರೆರಡು ಸಾವಿರ ಕೊಡಲು ಉತ್ಸಾಹದಿಂದ ಮುಂದೆ ಬಂದವರು ಉಡುಪಿಯ ಶ್ರೀಮಂತರಲ್ಲ, ಪುಂಡಲೀಕ ಶೆಣೈ ಅವರು ತಾನು, ತನ್ನ ಜನ ಒಟ್ಟಾಗಿ ನೋಡಬೇಕು – ಇದು ಅವರ ಸಂತೋಷ. ಅದಕ್ಕೋಸ್ಕರ ತನ್ನ ಅಲ್ಪ ಉಳಿತಾಯದಿಂದ ಉಪಕಾರವಾದರೆ ತನ್ನ ಜೀವನ ಸಾರ್ಥಕ ಎಂದುಕೊಂಡರು. ನಾಟಕ ಕಂಪೆನಿ ಉಡುಪಿಗೆ ಬಂದು, ವಾರಪೂರ್ತಿ ಶೆಣೈ ಅವರಿಗೂ ಉಡುಪಿಯವರಿಗೂ ಮನರಂಜನೆ ಮಾಡಿದಾಗ ಶೆಣೈ ಆತ್ಮ ಧನ್ಯತೆ ಪಡೆಯಿತು.

* * *

ಮಣಿಪಾಲದ ಶಿಕ್ಷಣ ಸಂಘಗಳು ಉದಯವಾಗುವುದಕ್ಕೂ ಮುನ್ನವೇ ಪುಂಡಲೀಕ ಶೆಣೈ ಅವರು ಡಾ। ಪೈ ಅವರ ಅನೇಕ ಬ್ಯಾಂಕಿಂಗ್ ಶಿಕ್ಷಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಡಾ। ಪೈ ಮಣಿಪಾಲದ ಪ್ರತಿ ಯೋಜನೆ ಮುಂದಿಟ್ಟಾಗಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಸವಾಲು ಪುಂಡಲೀಕ ಶೆಣೈ ಅವರದ್ದು. ಸೂಚನೆಗಳೂ ಅವರದೇ. ಎಲ್ಲಾ ವಿಧಾಯಕ. ಅದರಲ್ಲಿ ತನ್ನ ಅಖಿಲಸೇವೆ ಸದಾ ಸನ್ನಿಹಿತ. ಪ್ರಶ್ನೆಪತ್ರಿಕೆ ತಯಾರಿಸುವುದೋ, ತಿದ್ದುವುದೋ ಯಾವುದೇ ಕೆಲಸ ಇರಲಿ ಅದು ತನ್ನದೇ ಎಂಬ ಅಭಿಮಾನ ಸಹಿತವಾಗಿ ಸಕಾಲದಲ್ಲಿ ಮುಗಿಸಿ ಕೊಡುತ್ತಿದ್ದರು. ಎಲ್ಲೂ ತನ್ನ ಹೆಸರು ಪ್ರಚಾರವಾಗಬೇಕೆಂದು ಅವರು ಅಪೇಕ್ಷೆ ಪಡಲಿಲ್ಲ, ಪತ್ರಿಕಾ ಪ್ರಕಟನೆಗೆ ಕಾತರಿಸಲಿಲ್ಲ. ಸನ್ಮಾನೋತ್ಸವಗಳಿಗೆ ಸದಾ ಸರ್ವದಾ ಸಿದ್ಧರೂ, ಪ್ರಸಿದ್ಧರೂ ಆದ ಉಡುಪಿಯ ಜನ ಒಂದು ದಿನ ಪುಂಡಲೀಕ ಶೆಣೈ ಅವರಿಗೂ ತಗಲಿದರು. ನಿಮಗೊಂದು ಸನ್ಮಾನ ಮಾಡುತ್ತೇವೆ ಎಂದರು. ಶೆಣೈ ಸಟಕ್ಕನೆ ಬೇಡ ಎಂದಾಗ ನಿಮ್ಮ ಫೋಟೋ ಇಟ್ಟು ಸನ್ಮಾನ ಮಾಡುತ್ತೇವೆಂದು ಆಪ್ತರೊಬ್ಬರು ಪ್ರತಿಭಟಿಸಿದಾಗ ಶೆಣೈ ಒಲ್ಲದ ಮನಸ್ಸಿನಿಂದ ಸನ್ಮಾನಕ್ಕೆ ಬಂದರು. ಅಲ್ಲಿಯೂ ಹಾರ ಒಲ್ಲೆ ಎಂದರು. ಒಪ್ಪಿಸಬೇಕಾದರೆ ಸಾಕುಬೇಕಾಯಿತು. ಎಂತೆಂಥ ಎಲೆಮರೆಯ ಕಾಯನ್ನಾದರೂ ಮರೆಯಿಂದ ಹೊರಗೆಳೆದು ಹಣ್ಣು ಮಾಡಬಲ್ಲ ಸನ್ಮಾನಕರು ಶೆಣೈ ಅವರಿಗೆ ಹಾರವನ್ನು ತೊಡಿಸಿದರು. ಆದರೆ ಹಿಂದೆ ನಿಮ್ಮನ್ನು ಕಾರಲ್ಲಿ ಬಿಡುತ್ತೇವೆಂದಾಗ ಮಾತ್ರ ಶೆಣೈ ಅವರು ಸಿಡಿದೆದ್ದರು – ಎದ್ದರು ಅಂದರೆ ಎದ್ದರೇ. ಎದ್ದು ಹೊರಟರೇ. ಸನ್ಮಾನೋತ್ಸವ ಮಾಡಿಸಿಕೊಂಡವನೊಬ್ಬ ಅವನ ಮನೆಯಿಂದ ನಡೆದುಕೊಂಡು ಬಂದ, ಮತ್ತು ಅಲ್ಲಿಂದ ನಡೆದುಕೊಂಡೇ ಹೋದ ಕಥೆ ನೀವು ಕೇಳಿದ್ದೀರಾ ? ಅದೇ ಅವರ ಜೀವನದುದ್ದಕ್ಕೂ ವ್ಯಾಪಿಸಿದ ಸತ್ಯಕಥೆ. ಬೇರೆಯವರಿಗೆ ಎಷ್ಟು ಬೇಕಾದರೂ ಸನ್ಮಾನ ಮಾಡಿ ಕೊನೆ ತನಕ ನೋಡಿ ಸಂತೋಷಪಡುವ ತನಗೂ ಸನ್ಮಾನವಾಗಿ ಬಿಟ್ಟಿತಲ್ಲಾ ಎಂಬುದೊಂದೇ ದುಃಖವನ್ನು ಅವರು ಈಗ ಭಗವಂತನ ಹತ್ತಿರ ತೋಡಿಕೊಂಡಾರೆಂದು ನನ್ನ ಊಹೆ. ನೇರವಾದ ನಡೆ, ನೇರವಾದ ನುಡಿ, ಮಗುವಿನ ನಿಷ್ಕಲ್ಮಷ ಹೃದಯ, ಕರ್ತವ್ಯಪ್ರಜ್ಞೆ, ದುರ್ಬಲರ ಬಗ್ಗೆ ಅನುಕಂಪವನ್ನು ಆತ ತೋರಿಸಿದ ನೂರು ರೀತಿ, ವಿದ್ಯಾಪಕ್ಷಪಾತ, ವಿದ್ಯಾರ್ಥಿಪ್ರೀತಿ ಮುಂತಾದ ಹಲವು ಗುಣ ಪೂರ್ಣರಾಗಿ ಬಾಳಿನುದ್ದಕ್ಕೂ ದುಡಿದ ಶೆಣೈ ಅವರ ಪುಣ್ಯತೆ, ಚೇತನದ ಗುರಿ ಪೂರ್ಣತೆಯ ಕಡೆಗೆ.

ಪುಂಡಲೀಕ ಶೆಣೈ ಇನ್ನಿಲ್ಲ; ಅಂಥವರು ಮುನ್ನಿರಲಿಲ್ಲ, ಇನ್ನು ಬರುವುದೂ ಇಲ್ಲ.

●

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾತಃಸ್ಮರಣೀಯ ಅಧ್ಯಾಪಕ

ದಿ| ಯು. ಪುಂಡಲೀಕ ಶೆಣೈ

– ಶ್ರೀ ಟಿ. ನಾರಾಯಣ ಎಂ. ಪೈ, ಮಣಿಪಾಲ

ನಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಅನೇಕ ಮಂದಿ ಅಧ್ಯಾಪಕರ ಸಂಪರ್ಕ ಒದಗಿ ಬರುತ್ತದೆ. ಎಲ್ಲಾ ಅಧ್ಯಾಪಕರನ್ನು ನಾವು ಆಗಾಗ ನೆನಪಿಸಿಕೊಳ್ಳುವುದಿಲ್ಲ. ಕೆಲವೇ ಮಂದಿ ಅಧ್ಯಾಪಕರು ನಮ್ಮ ಮನಸ್ಸು-ಹೃದಯದ ಮೇಲೆ ವಿಶೇಷ ಪ್ರಭಾವ ಬೀರಿ ನಮ್ಮ ವ್ಯಕ್ತಿತ್ವದ ವಿಕಸನಕ್ಕೆ ನೆರವಾಗಿರುತ್ತಾರೆ. ಅಂತಹ ಪ್ರಾತಃಸ್ಮರಣೀಯರಾದ, ಆಗಾಗ ನೆನಪಿಸಿಕೊಳ್ಳುವ, ಅವರ ಉಪಕಾರವನ್ನು ಕೃತಜ್ಞತೆಯಿಂದ ನೆನೆಯುವ ಒಬ್ಬರು ಪ್ರತಿಭಾಶಾಲಿ ಅಧ್ಯಾಪಕರ ಕುರಿತು ಎರಡು ವಾಕ್ಯ ಬರೆಯಲು ನನಗೆ ಅತೀವ ಸಂತೋಷವೆನಿಸುತ್ತದೆ – ಅವರೇ ದಿವಂಗತ ಯು. ಪುಂಡಲೀಕ ಶೆಣೈಯವರು. ಶ್ರೀಯುತರು ನಮ್ಮ ತಂದೆ ದಿ| ಡಾ. ಟಿ.ಎಂ.ಎ. ಪೈಗಳ ಪರಮ ಮಿತ್ರರು. ಆರಂಭದಲ್ಲಿ ಡಾ. ಪೈಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದವರು.

ಶ್ರೀಯುತ ಪುಂಡಲೀಕ ಶೆಣೈಯವರು ಉಡುಪಿ ಕ್ರಿಶ್ಚಿನ್ ಹೈಸ್ಕೂಲಿನಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ಮಣಿಪಾಲ ಹೈಸ್ಕೂಲಿಗೆ (ಈಗ ಮಣಿಪಾಲ ಪದವಿಪೂರ್ವ ಕಾಲೇಜ್) ಮುಖ್ಯೋಪಾಧ್ಯಾಯರಾಗಿ ಬಂದರು. ಆಗಲೇ ಅವರು ಉತ್ತಮ ಗಣಿತ ಹಾಗೂ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ನಾವೆಲ್ಲಾ ಅಂದು ಅವರ ವಿದ್ಯಾರ್ಥಿಗಳಾದದ್ದು ದೊಡ್ಡ ಭಾಗ್ಯವೆಂದು ತಿಳಿದಿದ್ದೇವೆ. ಗಣಿತವನ್ನು ಲೀಲಾಜಾಲವಾಗಿ ಅವರು ಕಲಿಸುತ್ತಿದ್ದು ಎಂತಹ ಮಂದಮತಿಗೂ ಅರ್ಥವಾಗುತ್ತಿತ್ತು. ಪಾಠಪಟ್ಟಿಯ ಅವರ ಇನ್ನೊಂದು ಪ್ರೀತಿಯ ವಿಷಯ ಇಂಗ್ಲಿಷ್. ಇಂಗ್ಲಿಷ್ ವ್ಯಾಕರಣದಲ್ಲಿ ಅವರ ಪಾಂಡಿತ್ಯ ಅಮೋಘವಾದುದು. ಇಂಗ್ಲಿಷ್ ಆಗಲೀ, ಗಣಿತವಾಗಲೀ – ಅವರ ಪಾಠಪ್ರವಚನ ಅಷ್ಟೊಂದು ಆಕರ್ಷಕವಾಗಿತ್ತು.

ಶ್ರೀಯುತ ಪುಂಡಲೀಕ ಶೆಣೈಯವರು ತಮ್ಮ ಅಧ್ಯಾಪಕ ವೃತ್ತಿಯನ್ನು ಒಂದು 'ತಪಸ್ಸು' ಅಥವಾ 'ಆರಾಧನೆ' ಎಂದು ತಿಳಿದವರು; ಆಜನ್ಮ ಬ್ರಹ್ಮಚಾರಿಯಾಗಿದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ತಮ್ಮ ಕೆಲಸದಲ್ಲಿ ವೃತ್ತಿಪರತೆಯನ್ನು ತೋರಿಸಿದರು. ಒಮ್ಮೆ ಒಂದು ಸಮಾರಂಭದಲ್ಲಿ ಅಧ್ಯಾಪಕ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಅವರಾಡಿದ ಮಾತು ಅವರ ಜೀವನ ದೃಷ್ಟಿ, ವೃತ್ತಿಪರತೆಯನ್ನು ಎತ್ತಿತೋರಿಸುತ್ತದೆ. ''ನಾನು ಅಧ್ಯಾಪಕನಾಗಿ ಈ ವೃತ್ತಿಗೆ ನನ್ನ ಸಂಪೂರ್ಣ ಶಕ್ತಿ-ಕಾಲ ವ್ಯಯವಾಗಬೇಕು. ಆದ್ದರಿಂದ ನನ್ನ ಮದುವೆ ನನ್ನ ಶಾಲೆಯೊಂದಿಗೆ ಮತ್ತು ಶಿಕ್ಷಣಕ್ಕೆ ಆಗಿಬಿಟ್ಟಿದೆ.''. ಶಾಲೆ-ಶಿಕ್ಷಣ-ಶಿಕ್ಷಣಕ್ಕೆ ಸಂಬಂಧಿಸಿದ ಸೇವಾಕಾರ್ಯಗಳೇ ಅವರ ದಿನಚರಿಯಾಯಿತು. ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೂ ಅವರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಗಣಿತ ಹಾಗೂ ಇಂಗ್ಲಿಷ್‌ನಲ್ಲಿ ಅಸಂಖ್ಯಾತ ಮಂದಿಗೆ ಉಚಿತ ಟ್ಯೂಶನ್ ನೀಡಿದ್ದಾರೆ. ಎಷ್ಟೋ ಮಂದಿ ಇವರಿಂದ ಇಂಗ್ಲಿಷ್, ಗಣಿತ ಪಾಠ ಹೇಳಿಸಿಕೊಂಡು ಎಸ್.ಎಸ್.ಎಲ್.ಸಿ./ ಬಿ.ಎ. ಪರೀಕ್ಷೆಗೆ ಖಾಸಗಿಯಾಗಿ ಓದಿ ಉತ್ತೀರ್ಣರಾಗಿ ಅನೇಕರು ಪದೋನ್ನತಿ ಮಾಡಿದ್ದಾರೆ. ಅಲ್ಲದೆ ಅವರು ತಮ್ಮ ಮನೆಯಲ್ಲಿ ಪುಸ್ತಕ ನಿಧಿ (Book Bank) ಯನ್ನು ಸ್ಥಾಪಿಸಿ ಬಡವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ/ನೋಟ್ಸ್ ಪುಸ್ತಕಗಳನ್ನು ವಿತರಿಸಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅತಿ ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಹಣ ಕೂಡ ಸಹಾಯ ಮಾಡಿದ್ದಾರೆ. ಎಲ್ಲಿಯೂ ಶ್ರೀ ಶೆಣೈಯವರಿಗೆ ಹೆಸರು ಬರಬೇಕೆಂಬ ಆಶೆಯಿರಲಿಲ್ಲ. ಬಲಕೈ ಕೊಟ್ಟದ್ದು ಎಡಕೈಗೆ ಗೊತ್ತಿಲ್ಲ! ಇದು ಅವರ ದಾನ ಸಹಾಯದ ಪರಿ.

ಶ್ರೀಯುತ ಪುಂಡಲೀಕ ಶೆಣೈಯವರು ಅಧ್ಯಾಪನ ವೃತ್ತಿಯ ಜೊತೆಯಲ್ಲಿ ಓದುವ ಬರೆಯುವ ಹವ್ಯಾಸವನ್ನು ನಿರಂತರವಾಗಿ ನಡೆಸುತ್ತಿದ್ದರು. ಹತ್ತುಹಲವು ವಿಷಯಗಳಲ್ಲಿ ಅವರ ಅನುಭವ-ಪಾಂಡಿತ್ಯ ಅಗಾಧವಾಗಿದ್ದರೂ, ಅವರಿಗೆ ಅನುಮಾನ ಬಂದಾಗ ಇತರ ಅಧ್ಯಾಪಕರನ್ನೂ/ತಜ್ಞರನ್ನು ಕೇಳಿ ಚರ್ಚಿಸಿ ತಿಳಿದುಕೊಳ್ಳುತ್ತಿದ್ದರು. ಗಣಿತದ ಸಮಸ್ಯೆಯಿರಲಿ, ಇಂಗ್ಲೀಷ್/ಕನ್ನಡ ಶಬ್ದದ ಉಗಮವಿರಲಿ ಅವರ ಚರ್ಚಾ ವಿಧಾನ ಪಾಂಡಿತ್ಯಪೂರ್ಣವಾಗಿರುತ್ತಿತ್ತು. ಕೇವಲ ಶಾಲೆ-ಶಿಕ್ಷಣ ಪಾಠಪ್ರವಚನವಲ್ಲದೆ ಇತರ ಸಾಹಿತ್ಯ-ಕಲೆ-ನಾಟಕಗಳಲ್ಲಿ ಅವರ ಅಭಿರುಚಿ -ಆಸಕ್ತಿ ವಿಶೇಷವಾಗಿತ್ತು. ಉಡುಪಿಯ ''ರಂಗಭೂಮಿ'' ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ, ಸಂಸ್ಥೆಯ ರಂಗ ತರಬೇತಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಸಮಗ್ರ ಶಿಕ್ಷಣವೆಂದರೆ ಆಟ, ಪಾಠ, ಕಲೆಗಳ ಸಂಯುಕ್ತ ಹೊಂದಾಣಿಕೆಗಳಿಂದ ಕೂಡಿರಬೇಕೆಂಬುದು ಶ್ರೀಯುತ ಶೆಣೈಯವರ ಹಂಬಲವಾಗಿತ್ತು. ತಮ್ಮ ಕೊನೆಯ ಉಸಿರಿನವರೆಗೆ ಶ್ರೀಯುತ ಶೆಣೈಯವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿಯಾಶೀಲರಾಗಿ ದುಡಿದರು. ಏನೊಂದು ನರಳುವಿಕೆಯಿಲ್ಲದೆ ಯಾರಿಂದಲೂ ಸೇವೆ ಮಾಡಿಸಿಕೊಳ್ಳದೆ ಅವರು 1976ರಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು. ಅವರ ಸಂಪರ್ಕ ಹೊಂದಿದ ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ, ಸಮಾಜ ಸೇವಕರಿಗೆ ಶ್ರೀಯುತ ಶೆಣ್ಯೆಯವರ ನೆನಪು ಇನ್ನೂ ಹಸಿರಾಗಿಯೇ ಇದೆ. ಅವರ ಸ್ಮರಣೆ ನಮಗೆ ಸದಾ ಸ್ಫೂರ್ತಿಯನ್ನು ನೀಡುವಂತಾಗಲಿ.

* * *

ಸನ್ಮಾನ/ಅಪಮಾನ

ಅಮೃತ ಸ್ಯೇವ ತೃಪ್ಯೇತ
ಅಪಮಾನಸ್ಯ ಯೋಗವಿತ್
ವಿಷವಚ್ಚ ಜುಗುಪ್ಸೇತ್
ಸನ್ಮಾನಸ್ಯ ಸದಾ ದ್ವಿಜಃ

ಬ್ರಾಹ್ಮಣನು ಅಪಮಾನವಾಯಿತೆಂದರೆ ಅಮೃತವನ್ನು ಕುಡಿದಂತೆ ತೃಪ್ತಿಪಡಬೇಕು. ಸನ್ಮಾನದಿಂದ ವಿಷವನ್ನು ಕುಡಿದಂತೆ ಅಸಹ್ಯ ಪಡಬೇಕು. ಏಕೆಂದರೆ,

ಅಪಮಾನತ್ತಪೋ ವೃದಿಃ
ಸನ್ಮಾನಾಚ್ಚ ತಪಃ ಕ್ಷಯ

ಅಪಮಾನದಿಂದ ತಪಸ್ಸಿನ ವೃದ್ಧಿಯೂ ಸನ್ಮಾನದಿಂದ ತಪಸ್ಸಿನ ನಾಶವೂ ಉಂಟಾಗುತ್ತದೆ.

— ಪದ್ಮಪುರಾಣ

''ತಾನು ಆಚರಿಸಿ ಪರರಿಗೆ ಬೋಧಿಸುವವನೆ ಜ್ಞಾನಿ''



ಕರ್ಮಯೋಗಿ ದಿವಂಗತ ಡಾ। ಟಿ. ಎಂ. ಎ. ಪೈಯವರು ಏರ್ಪಡಿಸಿದ ಸಮಾರಂಭವೊಂದರಲ್ಲಿ ದಿವಂಗತ ಯು. ಪುಂಡಲೀಕ ಶೆಣೈಯವರು ತಮ್ಮ ಅನಿಸಿಕೆಗಳನ್ನು ಮುಕ್ತಮನಸ್ಸಿನಿಂದ ಪ್ರಕಟಿಸುತ್ತಿರುವುದು.

CC-O. In Public Domain. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri

ಒಕ್ಕಟ್ಟಿನಿಂದ ಯಾವ ಕಾರ್ಯವನ್ನೂ ಮಾಡಬಹುದು



Sri Vidyabharathi Book Centre, Sringeri

ಗೆಳೆಯರೊಂದಿಗೆ ದಿವಂಗತ ಯು. ಪುಂಡಲೀಕ ಶೆಣೈ (ಬಲಬದಿಯವರು).

CC-O. In Public Domain. Digitized by eGangotri

ನಿರಂತರ ಕಲಿತವರು, ಕಲಿಸಿದವರು

– ಶ್ರೀ ಎನ್. ಶ್ರೀಶ ಬಲ್ಲಾಳ
(ನಿವೃತ್ತ ರೀಡರ್, ಎಂ.ಜಿ.ಎಂ. ಕಾಲೇಜು ಉಡುಪಿ)

ಪ್ರಾತಃಸ್ಮರಣೀಯರಾದ ಶ್ರೀ ಯು. ಪುಂಡಲೀಕ ಶೆಣೈಯವರ ವ್ಯಕ್ತಿತ್ವ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದಂತೆ ಮೂಡಿ ನಿಂತಿದೆ. 1946-48ರ ಅವಧಿಯಲ್ಲಿ ನಾನು ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ 10 – 11ನೆಯ ತರಗತಿಗಳಲ್ಲಿ ಕಲಿಯುತ್ತಿದ್ದಾಗ ಶ್ರೀಮಾನ್ ಶೆಣೈಯವರ ವಿದ್ಯಾರ್ಥಿಯಾಗಿದ್ದೆನು. ವಿದ್ಯಾರ್ಥಿಗಳಿಗೆ ತಲೆನೋವು ತರುತ್ತಿದ್ದ 'ಐಚ್ಛಿಕ ಗಣಿತ' ಮತ್ತು 'ಇಂಗ್ಲಿಷ್ ವ್ಯಾಕರಣ'ವನ್ನು ಶ್ರೀಮಾನ್ ಶೆಣೈ ಒಂದಿಷ್ಟೂ ಲೋಪವಿಲ್ಲದೆ, ಹಂತದಿಂದ ಹಂತಕ್ಕೆ ತುಂಬ ಕ್ರಮಬದ್ಧವಾಗಿ ಕಲಿಸುತ್ತಿದ್ದರು. ಅವರ ಮನಸ್ಸು, ಮಾತು, ಉಡುಪು – ಎಲ್ಲವೂ ತುಂಬ ಸರಳ, ನಿರಾಡಂಬರ. ಅಚ್ಚ ಬಿಳಿ ವರ್ಣ; ತುಂಬಿದ ಕಪೋಲಗಳಿಂದ ಆಕರ್ಷಿಸುವ ಮಗುವಿನಂಥ ದುಂಡುಮುಖ, ಮುಗ್ಧ ನಗು; ಸಣ್ಣನೆಯ ಸ್ವರದ ಸರಳ ವಾಕ್ಯಗಳಿಂದ ಕೂಡಿದ ಮಾತುಗಳಿಂದ ಬೋಧನೆ; ಕಲಿಕೆ ಮತ್ತು ಕಲಿಸುವಿಕೆಗೆ ಮುಡುಪಾಗಿಟ್ಟ ಜೀವನ. ಆಬಾಲ್ಯಬ್ರಹ್ಮಚಾರಿಯಾಗಿ ಬದುಕಿದ ಅವರ ಆತ್ಮಸಂಯಮ ಮತ್ತು ಜ್ಞಾನನಿಷ್ಠೆ ಎಲ್ಲ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರವಾಗಿತ್ತು. ಮಹಾತ್ಮಾಗಾಂಧೀಜಿಯವರ ಸಮಕಾಲೀನರಾಗಿದ್ದ ಶ್ರೀ ಶೆಣೈ ಗಾಂಧೀಜಿಯವರಂತೆ ಸ್ವಾವಲಂಬಿಗಳಾಗಿ ಬದುಕಿದವರು; ಪರಪುಷ್ಟ ಪರೋಪದ್ರವಿ ವಿಲಾಸಿ ಜೀವನಕ್ಕೆ ಮರುಳಾಗುವವರಲ್ಲ. ಒಮ್ಮೆ ತರಗತಿಯಲ್ಲಿ ಪಾಠ ಮಾಡುತ್ತಾ, '' I sweep my floor, I wash my clothes (ನನ್ನ ಮನೆಯ ನೆಲವನ್ನು ನಾನೇ ಸ್ವಚ್ಛಗೊಳಿಸು ತ್ತೇನೆ, ನನ್ನ ಬಟ್ಟೆಗಳನ್ನು ನಾನೇ ಒಗೆಯುತ್ತೇನೆ) ಎಂದು ತನ್ನ ಬದುಕಿನ ರೀತಿಯನ್ನು ಸೂಚಿಸಿದ್ದರು.

ಸದಾ ಚಿಂತನಶೀಲ :

ಯಾವುದೇ ವಿಷಯವನ್ನು ಆಮೂಲಾಗ್ರವಾಗಿ ಮತ್ತು ನಿಖರವಾಗಿ ತಿಳಿಯ ಬೇಕು, ಹಾಗೂ ತಿಳಿಸಬೇಕು – ಇದು ಶ್ರೀ ಶೆಣೈಯವರ ಆದರ್ಶವಾಗಿತ್ತು. ಆ ನಿಟ್ಟಿನಲ್ಲಿ ಅವರು ಸದಾ ಚಿಂತನಶೀಲರಾಗಿದ್ದರು. ಅವಕಾಶ ದೊರೆತಾಗ, ತನ್ನ ಜಿಜ್ಞಾಸೆಗಳನ್ನು ಸಹೋದ್ಯೋಗಿಗಳೊಡನೆ, ಸ್ನೇಹಿತರೊಂದಿಗೆ, ವಿದ್ಯಾರ್ಥಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳೊಂದಿಗೆ ಮುಚ್ಚುಮರೆ ಇಲ್ಲದೆ ಮಂಡಿಸುತ್ತಿದ್ದರು. ಜಿಲ್ಲೆಯ ಇತರ ಪ್ರೌಢಶಾಲಾ ಶಿಕ್ಷಕರನ್ನೂ ಸಂಪರ್ಕಿಸಿ, ಅವರೊಂದಿಗೂ ವಿಚಾರ-ವಿನಿಮಯ ನಡೆಸುತ್ತಿದ್ದರು. ಅವರ ಚಿಂತನದ ಕ್ಷೇತ್ರ ತಾವು ಕಲಿಸುವ ವಿಷಯಗಳಿಗಷ್ಟೇ ಸೀಮಿತವಾಗಿರಲಿಲ್ಲ. ಆಂಗ್ಲಭಾಷೆಯ ಬೋಧನೆಗೋಸ್ಕರ ಅದರ ವಾಗ್ರೂಢಿಗಳನ್ನು (Idioms) ಸಂಗ್ರಹಿಸಿದ್ದ ಶ್ರೀ ಶೆಣೈ, ಕನ್ನಡದಲ್ಲೂ ವಿಪುಲವಾಗಿರುವ ಅಂಥ ವಾಗ್ರೂಢಿಗಳನ್ನು ಸಂಗ್ರಹಿಸಿದ್ದರಂತೆ. ಹಾಗೆ ಸಂಗ್ರಹಿಸಿದ್ದ ಕನ್ನಡ ವಾಗ್ರೂಢಿಗಳ ಕಿರುಹೊತ್ತಗೆಯನ್ನು ತಮ್ಮ ಖಾಸಗಿ ವಿದ್ಯಾರ್ಥಿ ಪ್ರೊ। ಎಂ. ರಾಜಗೋಪಾಲಾಚಾರ್ಯರಿಗೆ ತೋರಿಸಿ, ''ಕನ್ನಡದ ವಾಗ್ರೂಢಿಗಳು'' (1970) ಎಂಬ ಗ್ರಂಥವನ್ನು ಬರೆಯಲು ಸ್ಫೂರ್ತಿ ನೀಡಿದರಂತೆ. ಶ್ರೀ ಶೆಣೈಯವರ ಜ್ಞಾನನಿಷ್ಠೆಯ ಬಗ್ಗೆ ಆ ಗ್ರಂಥದ ಪ್ರಸ್ತಾವನೆಯಲ್ಲಿ ಶ್ರೀ ರಾಜಗೋಪಾಲಾಚಾರ್ಯರು ಬರೆದ ಮಾತುಗಳು ಇಂತಿವೆ : ''ಯಾವುದೇ ವಿಷಯದಲ್ಲಿ ಶ್ರೀಯುತ ಶೆಣೈಯವರ ಅಭಿನಿವೇಶ ಕೂಲಂಕಷ ಮತ್ತು ತಲಸ್ಪರ್ಶಿಯಾದುದು. ಇವರು ಈಗ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದರೂ ಅವಿಶ್ರಾಂತವಾಗಿ ದುಡಿಯುತ್ತಾ ಶಿಕ್ಷಣಕ್ಕಾಗಿಯೇ ಬದುಕನ್ನು ತೇಯುತ್ತಿದ್ದಾರೆ. ಎಂತಹ ವಿದ್ವಾಂಸನೂ ಅವರ ಅಭಿನಿವೇಶವನ್ನು ನೋಡಿ ಬೆರಗಾಗಬೇಕು – ಅಂತಹ ಪರಿಶ್ರಮ ಅವರದು.'' (ನೋಡಿ : 'ಕನ್ನಡದ ವಾಗ್ರೂಢಿಗಳು', ಪ್ರಕಾಶಕರು : ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, 1970).

ಗಣಿತ ಶಿಕ್ಷಕರಾಗಿ :

ನನಗೆ ತಿಳಿದಂತೆ ಗಣಿತ ಮತ್ತು ಆಂಗ್ಲಭಾಷೆಯ ವ್ಯಾಕರಣ – ಇವು ಶ್ರೀಯುತ ಶೆಣೈಯವರಿಗೆ ತುಂಬ ಪ್ರಿಯವಾದ ಪಠ್ಯವಿಷಯಗಳು. ಗಣಿತದ ಕಲಿಕೆಗೂ ಕಲಿಸುವಿಕೆಗೂ ತುಂಬ ಏಕಾಗ್ರತೆ ಅವಶ್ಯಕ.

ಏಕಾಗ್ರತೆಯನ್ನು ಸಾಧಿಸಲಾಗದವರ ಪಾಲಿಗೆ ಗಣಿತ ಪಾಠ ದುಃಖದ ಸಂಗತಿಯಾಗುತ್ತದೆ. ಏಕಾಗ್ರತೆ ಸಾಧ್ಯವಾದಾಗ ದುಃಖವೇ ಸುಖವಾಗಿ ಪರಿಣಮಿಸುತ್ತದೆ; ಮೊದಲು ವಿಷದಂತೆ ಕಾಣುತ್ತಿದ್ದುದು ಕಾಲಕ್ರಮೇಣ ಅಮೃತವಾಗುತ್ತದೆ. ಗಣಿತದ ಬೋಧನೆಯಲ್ಲಿ ಆ ಪ್ರಕಾರದ ಸಾತ್ವಿಕ ಸುಖವನ್ನು ಕಂಡವರು, ಉಂಡವರು, ಉಣಿಸಿದವರು ಶ್ರೀಯುತ ಪುಂಡಲೀಕ ಶೆಣೈ. ತರಗತಿಯಲ್ಲಿ ಗಣಿತದ ಸೂತ್ರಗಳನ್ನಾಗಲೀ, ಸಿದ್ಧಾಂತಗಳನ್ನಾಗಲೀ ಕ್ರಮವತ್ತಾಗಿ ಸಾಧಿಸಿ ತೋರಿಸಿದ ಬಳಿಕ ಉಂಟಾಗುವ ಸುಖವನ್ನು ''ಗೇರುಬೀಜಕ್ಕೆ ಬೆಲ್ಲ ಬೆರೆಸಿ ತಿಂದ ಹಾಗಾಗುತ್ತದೆ'' ಎಂದು ಬಣ್ಣಿಸುತ್ತಿದ್ದರು. ಸೂತ್ರಗಳನ್ನು ಕಲಿಸುವಾಗ ಹೆಜ್ಜೆಹೆಜ್ಜೆಗೂ ಕೈಚಪ್ಪಾಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಡೆದು ನಮ್ಮಲ್ಲಿ ಏಕಾಗ್ರತೆಯನ್ನು ಮೂಡಿಸುತ್ತಿದ್ದರು. ಆ ಕಾಲದಲ್ಲಿ ಶಾಲಾ ವಿದ್ಯಾರ್ಥಿಗಳು ಬರವಣಿಗೆಗೆ ಶಾಯಿ ಮತ್ತು handle (ಹ್ಯಾಂಡಲ್) ಎಂಬ ಹೆಸರಿನ ಲೇಖನಿಯನ್ನು ಬಳಸಬೇಕಾಗಿತ್ತು. ಪೆನ್‌ಗಳ ಬಳಕೆ ಹಿರಿಯರಿಗೆ ಮೀಸಲಾಗಿತ್ತು. ಒಂದು ದಿನ ಶಾಲಾವಧಿಯ ಬಳಿಕ ಅವರು ನಡೆಸುತ್ತಿದ್ದ ವಿಶೇಷ ತರಗತಿ (Special Class)ಯಲ್ಲಿ ಮೊದಲ ಬೆಂಚಿನಲ್ಲಿ ಕುಳಿತು ಬರೆಯುತ್ತಿದ್ದ ನನ್ನ ಶಾಯಿಯ ಸೀಸೆಗೆ ಚಪ್ಪಾಳೆ ಬಡೆಯುತ್ತಿದ್ದ ಶ್ರೀಯುತ ಶೆಣ್ಯೈಯವರ ಕೈಬೆರಳು ತಾಗಿ, ಶಾಯಿ ಅವರ ದೋತಿಯ ಮೇಲೆ ಚೆಲ್ಲಿ ಹೋಯಿತು. ನಾನು ಗುರುಗಳ ಕೋಪದ ಭಯದಿಂದ ಕಂಗೆಟ್ಟಿದ್ದೆನು. ಆದರೆ ಕಲಿಸುವ ಸುಖದಲ್ಲೇ ತಲ್ಲೀನರಾಗಿದ್ದ ಶ್ರೀಯುತ ಶೆಣ್ಯೈ ಒಂದಿಷ್ಟೂ ಉದ್ವಿಗ್ನರಾಗಲಿಲ್ಲ. ''ಈ ಶಾಯಿಯ ಕಲೆಯನ್ನು ಪ್ರದರ್ಶಿಸಿಕೊಂಡು ನಾನು ಹೇಗೆ ಬೀದಿಯಲ್ಲಿ ನಡೆಯಲಿ? ನೀನು ನನ್ನ ಮುಂದಿನಿಂದ ನಡೆದು ಹೋಗು. ನಾನು ನಿನ್ನ ಹೆಗಲು ಹಿಡಿದು ಯಾರಿಗೂ ಕಾಣಿಸದಂತೆ ಹಿಂದಿನಿಂದ ನಡೆದು ಬರುವೆನು'' ಎಂದು ಹಾಸ್ಯಮಾಡಿ ಆ ಪ್ರಕರಣವನ್ನು ಮುಗಿಸಿದರು.

ಗಣಿತದ ವಿದ್ಯಾರ್ಥಿಗಳಿಗೆ ಪಠ್ಯ ವಿಷಯಗಳ ಹೊರತಾಗಿ, ಮುಂದೆ ಕಾಲೇಜು ವಿದ್ಯಾಭ್ಯಾಸಕ್ಕೆ ಬೇಕಾಗುವ ಗಣಿತದ ಭಾಗಗಳನ್ನೂ ತಿಳಿಸುತ್ತಿದ್ದರು.

ರೇಖಾಗಣಿತದಲ್ಲಿ ಸಮಾನಾಂತರ ರೇಖೆಗಳು (Parallel Lines) ಒಂದನ್ನೊಂದು ಸಂಧಿಸಲಾರವು ಎಂಬುದು ಒಂದು ಸ್ವತಃಸಿದ್ಧ ಸೂತ್ರ (Postulate). ಅಂತಹ ಸ್ವತಃಸಿದ್ಧ ಸೂತ್ರಗಳನ್ನು ಇನ್ನೊಂದು ಸೂತ್ರದಿಂದ ಸಾಧಿಸಲಾಗದು. ಆದರೆ ಶ್ರೀಯುತ ಶೆಣ್ಯೈಯವರು ಸತತ ಪರಿಶ್ರಮದಿಂದ ಸಮಾನಾಂತರ ರೇಖೆಗಳಿಗೆ ಸಂಬಂಧಿಸಿದ ಈ ಸ್ವತಃಸಿದ್ಧ ಸೂತ್ರವನ್ನು ಬೇರೆ ಸೂತ್ರಗಳ ನೆರವಿನಿಂದ ಸಾಧಿಸಬಹುದು ಎಂದು ತೋರಿಸಿಕೊಟ್ಟರು. ಪರದೇಶಗಳಲ್ಲೂ ಹೀಗೆ ಸಾಧಿಸದವರುಂಟು ಎಂದು ಶ್ರೀಯುತ ಶೆಣ್ಯೈಯವರ ಪಟ್ಟಶಿಷ್ಯರಾಗಿದ್ದ ಹಾಗೂ ನನ್ನ ಸಹಪಾಠಿಯಾಗಿದ್ದ ಡಾ। ಕಟ್ಟಿಂಗೇರಿ ಮಾಧವ ಹೆಬ್ಬಾರ್ ನನಗೆ ಇತ್ತೀಚೆಗೆ ತಿಳಿಸಿದರು. (ಡಾ। ಮಾಧವ ಹೆಬ್ಬಾರ್ ಸುರತ್ಕಲ್‌ನ ಇಂಜಿನೀಯರ್ ಕಾಲೇಜಿನಲ್ಲಿ ಇಲೆಕ್ಟ್ರಾನಿಕ್ಸ್ ಪ್ರೊಫೆಸರರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.)

ಆಂಗ್ಲಭಾಷಾ ವ್ಯಾಕರಣದ ಶಿಕ್ಷಕರಾಗಿ

ಆ ಕಾಲದಲ್ಲಿ – ಪ್ರಾಯಶಃ ಈ ಕಾಲದಲ್ಲೂ – ಪ್ರಸಿದ್ಧವಾಗಿದ್ದ 'ರೆನ್' (Wren) ಎಂಬವರು ಬರೆದ ಆಂಗ್ಲಭಾಷಾ ವ್ಯಾಕರಣದ ನಿಯಮಗಳನ್ನು ಶ್ರೀಯುತ ಶೆಣ್ಯೈ ಗಣಿತದ ಸೂತ್ರಗಳ ಮಾದರಿಯಲ್ಲೇ ಮಂಡಿಸಿ, ಬೋಧಿಸುತ್ತಿದ್ದರು. ಅವರ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಕರಣ ಪಾಠಗಳನ್ನು ಜೀರ್ಣಿಸಿಕೊಂಡ ವಿದ್ಯಾರ್ಥಿಯು ವಾಕ್ಯಗಳ ರಚನೆಯಲ್ಲಿ ಎಂದಿಗೂ ವ್ಯಾಕರಣದ ನಿಯಮಗಳನ್ನು ಮೀರಲಾರನು. ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಶ್ರೀಯುತ ಶೆಣೈಯವರಿಗೆ ಸಮಕಾಲೀನರಾಗಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಯುತ ಎ. ಎಸ್. ಕಾರಟ್ ಮೇಲ್ಮಟ್ಟದ ಆಂಗ್ಲಭಾಷಾ ಬೋಧಕರಾಗಿದ್ದರು. ಅಂಥವರೂ ಶಾಲಾ ವಾರ್ಷಿಕೋತ್ಸವದ ವರದಿಯ ಶುದ್ಧ ಪ್ರತಿಯನ್ನು ತಯಾರಿಸುವ ಮುನ್ನ, ವ್ಯಾಕರಣ ಶುದ್ಧಿಗಾಗಿ ಕರಡುಪ್ರತಿಯನ್ನು ಶ್ರೀ ಪುಂಡಲೀಕ ಶೆಣೈಯವರ ಕೈಗೆ ಕೊಡುತ್ತಿದ್ದರು ಎಂದು ಕೇಳಿದ್ದೇನೆ. ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ನಂತರವೂ ಅವರು ಶಿಕ್ಷಕರ ಹಾಗೂ ಸುಶಿಕ್ಷಿತ ವಿದ್ಯಾರ್ಥಿಗಳ ಸಂಪರ್ಕವನ್ನು ಇರಿಸಿಕೊಂಡಿದ್ದರು. ಉಡುಪಿಯಲ್ಲಿ ಕಾಲೇಜುಗಳು ಸ್ಥಾಪನೆಗೊಂಡಾಗ, ಆ ಕಾಲೇಜುಗಳ ಶೈಕ್ಷಣಿಕ ಸಮಾರಂಭಗಳ ಸಭೆಯಲ್ಲಿ ತಪ್ಪದೆ ಪಾಲುಗೊಳ್ಳುತ್ತಿದ್ದರು.

ಇತ್ತೀಚಿನ ವರ್ಷಗಳಲ್ಲಿ ಇಂಗ್ಲಿಷ್ ಭಾಷಾ ಮಾಧ್ಯಮದ ವ್ಯಾಮೋಹದಿಂದ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಯಲಾರರು ಎಂಬ ತಪ್ಪುಕಲ್ಪನೆ ಹರಡುತ್ತಿದೆ. ಇದಕ್ಕೆ ವಿರುದ್ಧವಾಗಿ ಶ್ರೀಯುತ ಶೆಣೈ ಕನ್ನಡ ಭಾಷೆಯ ನೆರವಿನಿಂದಲೇ ಇಂಗ್ಲಿಷ್ ಭಾಷೆಯ ನಿಯಮಗಳನ್ನೂ ಪ್ರಯೋಗಗಳನ್ನೂ ಪರಿಣಾಮಕಾರಿಯಾಗಿ ಕಲಿಸಬಲ್ಲವರಾಗಿದ್ದರು. ಆ ನಿಟ್ಟಿನಲ್ಲಿ ನೆರವು ನೀಡುವ ಪುಸ್ತಕಗಳನ್ನೂ ಬರೆದು ಪ್ರಕಟಿಸಿದ್ದಾರೆ. ಇಂಗ್ಲಿಷ್ ಭಾಷೆಯ ಗಂಧಗಾಳಿ ಸೋಂಕದ ಅನೇಕ ವಯಸ್ಕ ಖಾಸಗಿ ವಿದ್ಯಾರ್ಥಿಗಳಿಗೆ ಅವರು ಮನೆಯಲ್ಲೇ ಉಚಿತವಾಗಿ ಪಾಠ ಹೇಳಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಚೆನ್ನಾಗಿ ತೇರ್ಗಡೆ ಹೊಂದುವಂತೆ ಮಾಡಿದ್ದಾರೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ಹೊಸದಾಗಿ ನೇಮಕಗೊಂಡ ನೂರಾರು ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳಿಗೆ ಹಣಕಾಸಿಗೆ ಸಂಬಂಧಿಸಿದ ಗಣಿತ ಪಾಠಗಳನ್ನು ಕಲಿಸಿ ನೆರವಾಗಿದ್ದಾರೆ. ಉಡುಪಿಯ ಸೈಂಟ್ ಸಿಸಿಲೀಸ್ ಹೈಸ್ಕೂಲಿನಲ್ಲಿ ಗಣಿತ ಶಿಕ್ಷಕರಾಗಿದ್ದ ಯು. ಶಿವರಾವ್ ಮತ್ತು ಶ್ರೀಯುತ ಶೆಣೈ ಜತೆ ಸೇರಿ ಸ್ವಲ್ಪಕಾಲ ಉಡುಪಿಯ ರಥಬೀದಿಯಲ್ಲಿ ಖಾಸಗಿ ವಿದ್ಯಾರ್ಥಿಗಳಿಗೋಸ್ಕರ ರಾತ್ರಿ ತರಗತಿಗಳನ್ನು ನಡೆಸುತ್ತಿದ್ದರಂತೆ.

ಕಲಾಪ್ರೇಮಿ

ತರಗತಿಯೊಳಗೆ ಕಟ್ಟುನಿಟ್ಟಾಗಿ ವರ್ತಿಸುತ್ತಿದ್ದ ಶ್ರೀಯುತ ಶೆಣೈ ತರಗತಿಯ ಹೊರಗೆ ನಡೆಯುತ್ತಿದ್ದ ಪಾಠೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳೊಡನೆ ತರಗತಿಯ ಬಿಗುಮಾನವನ್ನು ಮರೆತು ಖಾತನಾಡುತ್ತಿದ್ದರು, ಹುರಿದುಂಬಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿದ್ದರು. ಸಂಗೀತ, ರಂಗಕಲೆ – ಇವು ಅವರಿಗೆ ತುಂಬ ಪ್ರಿಯವಾದ ಕಲೆಗಳು; ಕ್ರಿಕೇಟ್ ಆಟವನ್ನು ಟೀಕಿಸುತ್ತಿದ್ದರು; ಫುಟ್‌ಬಾಲ್ ಅವರು ಮೆಚ್ಚುತ್ತಿದ್ದ ಆಟ. ಉಡುಪಿಯ 'ಸಂಗೀತ ಸಭೆ' ಮತ್ತು 'ರಂಗಭೂಮಿ' ಅವರ ಹಳೆವಿದ್ಯಾರ್ಥಿಗಳಿಂದಲೇ ಸ್ಥಾಪನೆಗೊಂಡು ಬೆಳೆದ ಕಲಾಸಂಸ್ಥೆಗಳು. ತೆರೆಯ ಮರೆಯಲ್ಲಿದ್ದು ಅವರು ಈ ಸಂಸ್ಥೆಗಳನ್ನು ಪೋಷಿಸಿದ್ದಾರೆ.

ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ಕಾಣಿಸಿಕೊಳ್ಳದೆ, ತೆರೆಯ ಮರೆಯಲ್ಲಿದ್ದು, ನಿರ್ವಂಚನೆಯಿಂದ ದುಡಿಯುವುದು ಅವರ ಸ್ವಭಾವ. ನಾವು ಕ್ರಿಶ್ಚಿಯನ್ ಹೈಸ್ಕೂಲಿನ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಕಲಿಯುತ್ತಿದ್ದ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತ ವರ್ಷ (1947-48). ಆಗಸ್ಟ್ 15, 1947ರಂದು ದೇಶದಲ್ಲಿ ಎಲ್ಲೆಲ್ಲೂ ಸಂಭ್ರಮ, ಮೆರವಣಿಗೆ, ದೇಶಭಕ್ತಿಯ ಹಾಡುಗಳ ನಿನಾದ. ಎಲ್ಲ ಸಂಸ್ಥೆಗಳಂತೆ ನಮ್ಮ ಹೈಸ್ಕೂಲಿನಲ್ಲೂ ರಾಷ್ಟ್ರಧ್ವಜವಂದನೆಯ ಸಮಾರಂಭ ಏರ್ಪಟ್ಟಿತ್ತು. ಮುಖ್ಯೋಪಾಧ್ಯಾಯ ಶ್ರೀಯುತ ಎ. ಎಸ್. ಕಾರಟ್ ಶ್ರೀಯುತ ಶೆಣೈಯವರನ್ನು ರಾಷ್ಟ್ರಧ್ವಜದ ಬಗ್ಗೆ ಒಂದು ಭಾಷಣವನ್ನು ನೀಡಬೇಕೆಂದು ಕೇಳಿಕೊಂಡಿದ್ದರು. ವೇದಿಕೆಯನ್ನೇರಿದ ಶ್ರೀಯುತ ಶೆಣೈ ರಾಷ್ಟ್ರಧ್ವಜದ ಮೂರು ವರ್ಣಗಳ ಮತ್ತು ಅಶೋಕ ಚಕ್ರದ ಸಾಂಕೇತಿಕ ಅರ್ಥವನ್ನು ತನ್ನ ತರಗತಿಯ ಪಾಠದ ರೀತಿಯಲ್ಲೇ ವಿವರಿಸಿ, ಕೆಲವೇ ನಿಮಿಷಗಳಲ್ಲಿ ತನ್ನ ಭಾಷಣವನ್ನು ಮುಗಿಸಿದರು. ಯಾವುದೇ ಸತ್ಯಸಂಗತಿಯನ್ನು ಹಲವು ವಾಕ್ಯಗಳಲ್ಲಿ ವಿಸ್ತರಿಸಿ ಬಣ್ಣಿಸುವ ಕಲೆ ಅವರ ಜಾಯಮಾನವಾಗಿರಲಿಲ್ಲ.

ಉಚಿತ ಶಿಕ್ಷಣದ ಹರಿಕಾರ

ಶ್ರೀಯುತ ಶೆಣೈಯವರು ಕೊನೆಯುಸಿರೆಳೆಯುವವರೆಗೂ ತನ್ನ ಮನೆಯನ್ನೇ ಒಂದು ಉಚಿತ ಶಿಕ್ಷಣದ ಶಾಲೆಯಾಗಿ ಬೆಳೆಸಿದ ಮಹಾನುಭಾವರು. ಉಚಿತ ಆಹಾರ, ಉಚಿತ ವೈದ್ಯಕೀಯ ಸೇವೆ, ಉಚಿತ ಶಿಕ್ಷಣ ವ್ಯವಸ್ಥೆ – ಇವು ಬಹುಜನರ ಹಿತಕ್ಕೋಸ್ಕರ ನಮ್ಮ ದೇಶದ ಪರಂಪರೆಯಲ್ಲಿ ರೂಢಿಗೊಂಡಿರುವ ಮಹಾಪುಣ್ಯ ಕಾರ್ಯಗಳು. ಆದರೆ ಇಂದು ಶಿಕ್ಷಣ, ಔಷಧಿ, ಆಹಾರ – ದುಬಾರಿ ಬೆಲೆ ತೆತ್ತು ಪಡೆಯಬೇಕಾದ ಮಾರುಕಟ್ಟೆಯ ಸರಕುಗಳಾಗಿವೆ. ಸರಕಾರದ ಉಚಿತ ನೆರವಿನಿಂದ ಶಿಕ್ಷಣ ಒದಗಿಸುವ ಶಾಲೆಗಳಲ್ಲಿ ವಿದ್ಯಾರ್ಥಿಗಳಿದ್ದರೂ ಸಾಕಷ್ಟು ಯೋಗ್ಯ ಶಿಕ್ಷಕರಿಲ್ಲ. ಶ್ರೀಮಾನ್ ಶೆಣೈಯವರ ಸ್ಮಾರಕವಾಗಿ, ಒಳ್ಳೆಯ ಗುಣಮಟ್ಟ ಉಳ್ಳ ಒಂದು ಉಚಿತ ಶಿಕ್ಷಣ ಸಂಸ್ಥೆ ಸ್ಥಾಪನೆಗೊಂಡರೆ, ಅವರ ಸ್ಮರಣೆ ಸಾರ್ಥಕವಾದೀತು. ●

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾದಾನಕ್ಕಾಗಿ ತನ್ನನ್ನು ತಾನೇ ಸಮರ್ಪಿಸಿಕೊಂಡ ಉಡುಪಿಯ "ಅಪೂರ್ವ ಶಿಕ್ಷಣ ತಪಸ್ವಿ" – ಶ್ರೀ ಪುಂಡಲೀಕ ಶೆಣ್ಯೆ

– ಶ್ರೀ ಪ. ರಾಘವೇಂದ್ರ ಕುಡ್ವ, ಉಡುಪಿ

ವಿದ್ಯಾಕ್ಷೇತ್ರಕ್ಕೆ ನಮ್ಮ ಜಿಲ್ಲೆ ಅರ್ಪಿಸಿದ ಮಹಾನ್ ಮೇಧಾವಿಗಳಲ್ಲಿ ಪಂಜೆ ಮಂಗೇಶರಾಯರು, ಅಮ್ಮೆಂಬಳ ಸುಬ್ರಾಯ ಪೈಗಳು, ಮಂಜೇಶ್ವರ ಗೋವಿಂದ ಪೈಗಳು, ಡಾ। ಟಿ. ಎಂ. ಎ. ಪೈಗಳು, ಶಿವರಾಮ ಕಾರಂತರೊಂದಿಗೆ ತನ್ನ ಕೊನೆಯ ದಿನಗಳ ವರೆಗೂ ತೆರೆಯ ಮರೆಯಲ್ಲೇ ಉಳಿದು ಯಾವ ಪ್ರಶಸ್ತಿ, ಪುರಸ್ಕಾರಗಳಿಗೂ ಒಲ್ಲೆನೆಂದು ನುಡಿದು ನಿಸ್ವಾರ್ಥದಿಂದ ಸರಸ್ವತಿಯ ಸೇವೆಗೈದ ಉಡುಪಿಯ ಅಪೂರ್ವ ಶಿಕ್ಷಣ ತಪಸ್ವಿ ಶ್ರೀ ಪುಂಡಲೀಕ ಶೆಣ್ಯೆಯವರೂ ಒಬ್ಬರು. ಇಂದು ಅವರ ವ್ಯಕ್ತಿ ಜೀವನದ ಕುರಿತು ಸರಿಯಾದ ಚಿತ್ರಣ ತಿಳಿದಿರುವವರು ಕೂಡಾ ಬಹಳ ವಿರಳ. ''ಸರಳ ಜೀವನ ಉದಾತ್ತ ಚಿಂತನ''ವೆಂಬ ಸೂಕ್ತಿಯ ಜೀವಂತ ಉದಾಹರಣೆ ಯಾಗಿದ್ದ ಶ್ರೀ ಶೆಣ್ಯೆಯವರು ತನ್ನ ಕೊನೆಗಾಲದ ತನಕವೂ ತೀರಾ ಸರಳ ಉಡುಗೆ ತೊಡುಗೆಗಳಾದ ಸೈಕಲ್ ಕಚ್ಚೆರೂಪ ತೊಟ್ಟ ಪಂಚೆ, ಮುಚ್ಚಿದ ಕೊರಳಿನ ಸಾದಾಖದ್ದರ್ ಕೋಟು ಹಾಗೂ ಖಾದಿ ಟೋಪಿಯನ್ನೊಂದು ತೊಟ್ಟುಕೊಂಡು ಕನ್ನಡಕವನ್ನು ಧರಿಸಿಕೊಂಡು ಮುಂಜಾನೆ 5 ಘಂಟೆಯಿಂದ ರಾತ್ರಿ ಎಂಟು-ಒಂಭತ್ತು ಘಂಟೆಯವರೆಗೂ ಬೇರೆ ಬೇರೆ ಪೂರ್ವ ನಿರ್ಧರಿತ ತಂಡಗಳಲ್ಲಿ ಬರುವ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಭಾಷಾಧ್ಯಯನ ವಿಷಯಗಳಲ್ಲಿ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅವರ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಶಾಲೆಯಿಂದ ಆರಂಭಿಸಿ ಇಂಜಿನಿಯರಿಂಗ್ ತನಕ ಕಲಿಯುವ ವಿದ್ಯಾರ್ಥಿಗಳು ತಾವು ಅಪೇಕ್ಷಿಸುವ ವಿಷಯಗಳಲ್ಲಿ ಪಾಠಗಳನ್ನು ಕಲಿಯಲು ಬರುತ್ತಿದ್ದರು. ಆದರೆ ಯಾವುದೇ ವಿದ್ಯಾರ್ಥಿಯಿಂದ ಆತ ಶ್ರೀಮಂತನಿರಲಿ ಅಥವಾ ತೀರಾ ಬಡವನಿರಲಿ ಆತನಿಂದ ಒಂದೇಒಂದು ಚಿಕ್ಕಾಸನ್ನು ಕೂಡಾ ಶುಲ್ಕವೆಂದು ಸ್ವೀಕರಿಸದೆ ವಿದ್ಯಾದಾನವನ್ನು ಮುಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಸ್ತದಿಂದ ನೀಡಿದ ವಿದ್ಯಾದಾನಿ ಶ್ರೀ ಶೆಣೈಯವರು. ಅಷ್ಟು ಸಾಲದೆಂಬಂತೆ ತನ್ನಲ್ಲಿಗೆ ಬರುವ ತೀರಾ ಬಡ ವಿದ್ಯಾರ್ಥಿಗಳಿಗೆ ಜಾತಿಭೇಧಗಳನ್ನು ಪರಿಗಣಿಸದೆ ಧರ್ಮಾರ್ಥ ವಾಗಿ ಅವರವರ ತರಗತಿಯ ಪಠ್ಯಪುಸ್ತಕಗಳನ್ನು ನೋಟ್ಸ್ ಪುಸ್ತಕಗಳನ್ನು ಅವರ ಶಾಲಾ ಫೀಸನ್ನು ಮತ್ತು ಅವರ ಶಾಲಾ ಸಮವಸ್ತ್ರಗಳನ್ನು ಕೂಡಾ ತನ್ನ ವ್ಯಕ್ತಿಗತ ಖರ್ಚಿನಿಂದ ಹೊಲಿಸಿಕೊಟ್ಟು ಯಾವ ಕಾರಣಕ್ಕೂ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಿಂತುಹೋಗಬಾರದೆಂಬ ಧೃಢನಿರ್ಧಾರದಿಂದ ಅವರಿಗೆ ಬೆಂಗಾವಲಾಗಿ ನಿಂತು ಪ್ರೋತ್ಸಾಹಿಸಿ ಅವರ ಸಕಾಲಿಕ ನೆರವಿನಿಂದಾಗಿ ಕಲಿತು ನೌಕರಿ ಗಳಿಸಿ ಸ್ವಂತ ಕಾಲಿನಲ್ಲಿ ನಿಂತು ಇಂದು ತಾವೂ ಬೆಳೆದು ತಮ್ಮ ಮನೆಯನ್ನೂ ಬೆಳಗಿಸಿದ ಸಾವಿರಾರು ಸಫಲ ಜೀವಿಗಳು ಇಂದಿಗೂ ಶ್ರೀ ಶೆಣೈಯವರನ್ನು ಪ್ರಾತಃಸ್ಮರಣೀಯರೆಂದು ಸ್ಮರಿಸಿ ಕೊಳ್ಳುತ್ತಿದ್ದಾರೆ. ಅವರು ತಮ್ಮ ಜೀವಿತಾವಧಿಯಲ್ಲಿ ವಿದ್ಯಾದಾನದ ರೂಪದಲ್ಲಿ ಹಚ್ಚಿದ ಸಾವಿರಾರು ಹಣತೆಗಳು ಇಂದು ಅವರ ಜೀವಂತ ಸ್ಮಾರಕಗಳಾಗಿ ಅವರ ನಿಸ್ವಾರ್ಥ ಸೇವೆಯ ಕುರುಹಾಗಿ ನಾಡಿನಾದ್ಯಂತ ಬೆಳಗುತ್ತಿವೆ.

ಶ್ರೀ ಪುಂಡಲೀಕ ಶೆಣೈಯವರ ಪೂರ್ವಿಕರಾದ ಶ್ರೀ ಲಕ್ಷ್ಮಣ ಶೆಣೈಯವರ ಕುಟುಂಬಿಕರು ಗೋವೆಯಿಂದ ಬಂದು ಉಡುಪಿಯ ಸಮೀಪದ ಪಂಜಿಬೆಟ್ಟು ಗ್ರಾಮದಲ್ಲಿ ನೆಲೆ ನಿಂತಿದ್ದರು. ಶ್ರೀ ಲಕ್ಷ್ಮಣ ಶೆಣೈಯವರ ಪುತ್ರರಾದ ಶ್ರೀ ಜೋಗಪ್ಪ ಶೆಣೈಯವರು ಪಂಜಿಬೆಟ್ಟು ಗ್ರಾಮದಿಂದ ಉಡುಪಿಗೆ ಬಂದು ತೆಂಕಪೇಟೆಯಲ್ಲಿ ನೆಲಸಿದರು. ಶ್ರೀ ಜೋಗಪ್ಪ ಶೆಣೈಯವರು ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದು ಅವರಿಗೆ ಒಟ್ಟು ಒಂಭತ್ತು ಜನ ಮಕ್ಕಳು. ಆರು ಗಂಡು ಮತ್ತು ಮೂರು ಹೆಣ್ಣು. ಅವರೇ ಗಣಪತಿ, ಸರಸ್ವತಿ (ಸಪತಿ), ವೈಕುಂಠ, ದುರ್ಗಮ್ಮ, ವೆಂಕಟೇಶ, ವಾಸುದೇವ, ಪುಂಡಲೀಕ, ಸುಲೋಚನಾ ಮತ್ತು ರಾಮದಾಸ ಇವರುಗಳು. ಶ್ರೀ ಜೋಗಪ್ಪ ಶೆಣೈಯವರ ಕುಟುಂಬಿಕರು ತಮ್ಮ ದಕ್ಷತೆ, ಪ್ರಾಮಾಣಿಕತೆ ಮತ್ತು ವ್ಯಾವಹಾರಿಕ ಪಾರದರ್ಶಕತೆಗಾಗಿ ವಾಣಿಜ್ಯ ಕ್ಷೇತ್ರದಾದ್ಯಂತ ಇಂದಿಗೂ ಅತ್ಯುಚ್ಚ ಮಟ್ಟದ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರ ಪುತ್ರರಾದ ಶ್ರೀ ಪುಂಡಲೀಕ ಶೆಣೈಯವರು ಅವರ ಕುಟುಂಬದಲ್ಲಿಯೇ ಅಂದಿಗೆ ಅತ್ಯುಚ್ಚ ಮಟ್ಟದ ವಿದ್ಯಾಭ್ಯಾಸ ಪಡೆದವರಾಗಿದ್ದರು. ಅವರು ಜನಿಸಿದುದು ಉಡುಪಿಯಲ್ಲಿ 1896ರಲ್ಲಿ. ಅವರು ಆರಂಭದಲ್ಲಿ ಉಡುಪಿ ಬೋರ್ಡ್‌ಮಿಡ್ಲ್ ಸ್ಕೂಲ್‌ನಲ್ಲಿ (ನಂತರ ಅದು ಬೋರ್ಡ್ ಹೈಸ್ಕೂಲಾಯಿತು) ನಾಲ್ಕು ವರ್ಷಗಳ ಕಾಲ ವಿದ್ಯಾಭ್ಯಾಸಗೈದರು. ಆ ಬಳಿಕ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಓದಿ 1915ರ S.S.L.C.ಯ ಪ್ರಥಮ ತಂಡದಲ್ಲಿ ಪಬ್ಲಿಕ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿ ತೇರ್ಗಡೆಯಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri
ತದನಂತರ ಬಿ.ಎ. ಡಿಗ್ರಿ ಗಳಿಸಿ ಆ ಬಳಿಕ L.T. ಪರೀಕ್ಷೆಯಲ್ಲಿ ಅತ್ಯುತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಆ ಬಳಿಕ ಸುಮಾರು ಮೂರು ವರ್ಷಗಳ ಕಾಲ ಮಂಗಳೂರಿನ ಮಿಷನ್ ಸ್ಕೂಲಿನಲ್ಲಿ ಶಿಕ್ಷಕರಾಗಿ ದುಡಿದ ಶ್ರೀ ಪುಂಡಲೀಕ ಶೆಣೈಯವರು ತಾನು ಕಲಿತ ಶಾಲೆಯಾದ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿಯೇ 1924ರಿಂದ 1951ರ ವರೆಗೆ 27 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬಳಿಕ ಮಣಿಪಾಲದ ನವನಿರ್ಮಾತೃ ಡಾ। ಟಿ.ಎಂ.ಎ. ಪೈಯವರು ಸ್ಥಾಪಿಸಿದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ದುಡಿದು ಆ ಶಾಲೆಗೆ ಒಂದು ಅತ್ಯುತ್ತಮ ಭದ್ರ ಬುನಾದಿಯನ್ನು ಹಾಕಿಕೊಟ್ಟರು.

ತನ್ನ ಅಧ್ಯಾಪಕ ಜೀವನದ ನಿವೃತ್ತಿಯ ಬಳಿಕವೂ ತನ್ನ ಮನೆಯಲ್ಲಿಯೇ ವಿದ್ಯಾದಾಹಿಗಳಿಗೆ ಮುಂಜಾನೆಯಿಂದ ರಾತ್ರಿ ಒಂಭತ್ತು ಗಂಟೆಯ ತನಕವೂ ವಿವಿಧ ತರಗತಿಯ ವಿದ್ಯಾರ್ಥಿಗಳಿಗೆ ಪಾಠಗಳನ್ನೂ ನಿಶ್ಶುಲ್ಕವಾಗಿ ಹೇಳಿಕೊಡುತ್ತಿದ್ದರು. ಕೊನೆಯವರೆಗೂ ಅವಿವಾಹಿತರಾಗಿಯೇ ಉಳಿದು ವಿದ್ಯಾದಾನವನ್ನೇ ತನ್ನ ಜೀವನದ ಏಕಮೇವ ಧ್ಯೇಯಮಂತ್ರವನ್ನಾಗಿ ಪ್ರತಿಜ್ಞೆಗೈದು ಸುಮಾರು ಎಂಭತ್ತು ವರ್ಷಗಳ ತನ್ನ ಧೀರ್ಘಜೀವಿತಾವಧಿಯನ್ನೇ ಒಂದು ಜ್ಞಾನಯಜ್ಞದ ರೂಪದಲ್ಲಿ ನಡೆಸಿ ಉಡುಪಿಯ ಜನಜೀವನದಲ್ಲಿ ಮರೆಯಲಾಗದ, ಮರೆಯಬಾರದ ಅಚ್ಚನ್ನೊತ್ತಿ ಯಾವ ಸಂಘಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನಿತ್ತು ಗೌರವಿಸಲು ಮುಂದಾದರೂ ನಮ್ರತೆಯಿಂದ ತಿರಸ್ಕರಿಸಿ ಜನಮಾನಸದಲ್ಲಿ ''ಅತ್ಯಪೂರ್ವ ಶಿಕ್ಷಣ ತಪಸ್ವಿ'' ಯೆಂಬ ತುಂಬು ಮನಸ್ಸಿನ, ಹೃದಯದಾಳದ ಪ್ರೀತಿಯನ್ನು ಗಳಿಸಿ ತಾ 21-12-1976 ರಂದು ಅಗಲಿದ ಶ್ರೀ ಪುಂಡಲೀಕ ಶೆಣೈಯವರು ಪ್ರಾತಃಸ್ಮರಣೀಯರು, ಋಷಿಸಮಾನರು. ಅವರಂತಹ ಸರಸ್ವತಿ ಪುತ್ರರು ಹಿಂದೆಯೂ ಹುಟ್ಟಿಬಂದಿಲ್ಲ, ಮುಂದೆಯೂ ಬರುವುದು ಸಂಶಯಾಸ್ಪದ.

ಅವರು ತಮ್ಮ ಜೀವಿತಾವಧಿಯಲ್ಲಿ ಸಮಾಜದ ತೀರಾ ಬಡವಿದ್ಯಾರ್ಥಿಗಳಿಗಾಗಿ ಹುಟ್ಟುಹಾಕಿದ ''ಸೇವಾ ಸಮಾಜ''ವೆಂಬ ಅವರ ವ್ಯಕ್ತಿಗತ ಆರ್ಥಿಕ ನೆರವಿನಿಂದಲೇ ಅವರ ಜೀವನದ ಕೊನೆಯ ತನಕವೂ ಸೇವೆಗೆಯ್ಯುತ್ತಿದ್ದ ಸಂಸ್ಥೆ ಬಡವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ನೋಟ್ಸ್ ಪುಸ್ತಕಗಳನ್ನು, ಶಾಲಾ ಶುಲ್ಕವನ್ನು ಮಾತ್ರವಲ್ಲದೆ ಶಾಲಾಸಮವಸ್ತ್ರಗಳನ್ನೂ ಮುಕ್ತಹಸ್ತದಿಂದ ವಿತರಿಸುತ್ತಿತ್ತು. ಅವರ ಅಂತ್ಯದ ಮುನ್ನವೇ ಅವರು ಈ ಜವಾಬ್ದಾರಿಯನ್ನು ಉಡುಪಿಯ ಜಿ. ಎಸ್. ಬಿ. ಯುವಕ ಮಂಡಳಿಗೆ 1973ರಲ್ಲಿ ಹಸ್ತಾಂತರಿಸಿದ್ದರು. ಇದೀಗ ಜಿ. ಎಸ್. ಬಿ. ಯುವಕ ಮಂಡಳಿ ಅವರ ಈ ನಿಸ್ವಾರ್ಥ ಕಾರ್ಯವನ್ನು ಅವರ ಹೆಸರಿನಲ್ಲಿಯೇ ದಕ್ಷತೆಯಿಂದ ಮುಂದುವರಿಸುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

''ಹಣವನ್ನು ದಾನವಾಗಿತ್ತರೆ ಅದು ಕ್ರಮೇಣ ಖರ್ಚಾಗಿ ಹೋಗುತ್ತದೆ, ವಸ್ತ್ರವನ್ನು ದಾನವಾಗಿತ್ತರೆ ಅದು ಕ್ರಮೇಣ ಶಿಥಿಲವಾಗಿ ಹರಿದು ಹೋಗುತ್ತದೆ, ಆದರೆ ವಿದ್ಯೆಯನ್ನು ದಾನವಾಗಿತ್ತರೆ ಅದು ಕಾಲ ಕಳೆದಂತೆ ಬೆಳೆಯುತ್ತಾ, ಹೆಚ್ಚುತ್ತಾ ಹೋಗುತ್ತದೆ, ಆದುದರಿಂದ ವಿದ್ಯಾದಾನದಷ್ಟು ದೊಡ್ಡ ದಾನ ಇನ್ನೊಂದಿಲ್ಲ''

''ಕೆಲವರಲ್ಲಿ ವಿಶಾಲವಾದ ಹೃದಯವಿದೆ ಆದರೆ ದಾನ ಮಾಡಲು ಹಣವಿಲ್ಲ, ಕೆಲವರಲ್ಲಿ ಭಾರಿ ನಿಧಿಸಂಗ್ರಹ ವಿದ್ದರೂ ದಾನವೀಯಲು ಹೃದಯ ವೈಶಾಲ್ಯವಿಲ್ಲ''.

ಶ್ರೀ ಪುಂಡಲೀಕ ಶೆಣೈಯವರು ಇವೆರಡೂ ಮಾತುಗಳಿಗೂ ಅಪವಾದವೆಂಬಂತೆ ತಾನು ದುಡಿದು, ಗಳಿಸಿದ ಮತ್ತು ಉಳಿಸಿದ ಸಮಸ್ತ ಗಳಿಮೆಯನ್ನು ವಿದ್ಯಾದಾಹಿಗಳ ಸಮಗ್ರ ಶ್ರೇಯಸ್ಸಿಗಾಗಿ ಮುಡಿಪಿಟ್ಟು ಸಮರ್ಪಿಸಿ ತಮ್ಮ ಹೃದಯ ವೈಶಾಲ್ಯತೆಯನ್ನೂ ನಿಸ್ವಾರ್ಥಿ ಋಷಿತುಲ್ಯ ಜೀವನವನ್ನು 'ಈ ನಾಡಿನ ಜೀವನಾಡಿ' ಯಲ್ಲಿ ಪಡಿಮೂಡಿಸಿ ಅವರಂತಹ ವ್ಯಕ್ತಿ ಮತ್ತೊಬ್ಬನಿಲ್ಲ ಎಂದು ಶ್ರುತಪಡಿಸಿದ್ದಾರೆ.

ಶ್ರೀ ಪುಂಡಲೀಕ ಶೆಣೈಯವರು ಶಿಸ್ತು, ಸಮಯಪ್ರಜ್ಞೆ, ಸರಳ ಜೀವನ ವಿಧಾನದ ಪ್ರತಿರೂಪದಂತಿದ್ದರು. ಬಡವ, ಸಿರಿವಂತ; ಧನಿಕ, ನಿರ್ಗತಿಕ; ಮೇಲು, ಕೀಳು; ದೀನ, ದಲಿತ; ಆಜಾತಿ, ಈ ಜಾತಿ; ಎಂಬ ಯಾವುದೇ ಪರಿಭೇದಗಳು ಅವರ ಬಳಿ ತಪ್ಪಿಯೂ ಸುಳಿಯುತ್ತಿರಲ್ಲಿಲ್ಲ. ನೀತಿ, ನಿಯಮ, ವಿವೇಕಗಳಿಂದೊಡಗೂಡಿದ ಒಳ್ಳೆಯ ಕೆಲಸಗಳನ್ನು ಯಾರೇ ಮಾಡಲಿ ಅವುಗಳನ್ನು ಕೊಂಡಾಡುವ ಪ್ರವೃತ್ತಿ ಅವರಲ್ಲಿತ್ತು. ಹೊಗಳಿದಾಗ ಹಿಗ್ಗುವ, ತೆಗಳಿದಾಗ ಕುಗ್ಗುವ ಪ್ರವೃತ್ತಿ ಅವರದಾಗಿರಲಿಲ್ಲ. ಸ್ಥಿತಪ್ರಜ್ಞನಂತೆ ಎಲ್ಲವನ್ನೂ ಸಮದೃಷ್ಟಿಯಿಂದ ನೋಡುವ ಪ್ರಜ್ಞ ಅವರಾಗಿದ್ದರು. ಅದರಿಂದಾಗಿಯೇ ತಾವು ಅವರ ಶಿಷ್ಯರಾಗಿದ್ದೆವು ಎಂದು ಹೇಳಿಕೊಳ್ಳಲು ಅವರ ಶಿಷ್ಯರೆಲ್ಲರೂ ಹೆಮ್ಮೆಪಡುತ್ತಾರೆ.

ಶ್ರೀ ಪುಂಡಲೀಕ ಶೆಣೈಯವರ ಕುರಿತಾಗಿ ಅವರ ಸ್ತುತ್ಯಕಾರ್ಯದ ಕುರಿತಾಗಿ ವ್ಯಕ್ತ ಪಡಿಸಿದ ಕೆಲವು ಅನಿಸಿಕೆಗಳು ಇಂತಿವೆ.

ಶ್ರೀಮದ್ ಸುಧೀಂದ್ರತೀರ್ಥ ಸ್ವಾಮೀಜಿ :-

''ಶ್ರೀ ಪುಂಡಲೀಕ ಶೆಣೈಯವರು ಬಡವರಿಗಾಗಿ ತುಂಬ ಸಹಾಯ ಮಾಡಿದ ವ್ಯಕ್ತಿ ಅನೇಕರಿಗೆ ಉಚಿತವಾಗಿ ವಿದ್ಯಾದಾನ ಮಾಡಿದ ಹಿರಿಯ ಚೇತನ''.

* * *

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ ವಿದ್ಯಾಧಿರಾಜತೀರ್ಥ ಸ್ವಾಮೀಜಿ :-

''ಶ್ರೀ ಪುಂಡಲೀಕ ಶೆಣ್ಯೈಯವರು ಮಾಡಿದ ವಿದ್ಯಾದಾನ ಸಮಾಜಕ್ಕಿತ್ತ ಅತ್ಯುತ್ತಮ ಕೊಡುಗೆ''.

ಶ್ರೀ ಪುಂಡಲೀಕ ಶೆಣ್ಯೈಯವರು ನನ್ನ ಹತ್ತು, ಹಲವಾರು ಯೋಜನೆಗಳಿಗೆ ಸ್ಫೂರ್ತಿಯಿತ್ತ ಸಹಪಾಠಿ. ಅನೇಕ ವಿಷಯಗಳಲ್ಲಿ ಅವರೊಂದಿಗೆ ಸಮಾಲೋಚಿಸಿದ್ದೇನೆ.

ಡಾ। ಟಿ.ಎಂ.ಎ. ಪೈ, ಮಣಿಪಾಲ

* * *

ಶ್ರೀ ಪುಂಡಲೀಕ ಶೆಣ್ಯೈಯವರು ಸಮಾಜಕ್ಕೆ ಒಂದು ಸುಯೋಗ್ಯ ಪಥವನ್ನು ತೋರಿಸಿದ ಮಾರ್ಗದರ್ಶಿ.

ಶ್ರೀ ಕೆ.ಕೆ. ಪೈ, ಮಣಿಪಾಲ

* * *

ನಾನು ಶ್ರೀ ಪುಂಡಲೀಕ ಶೆಣ್ಯೈಯವರ ವಿದ್ಯಾರ್ಥಿಯಾಗಿದ್ದೆ. ಅವರಿಂದ ತುಂಬಾ ವಿಷಯಗಳನ್ನು ಕಲಿತಿದ್ದೇನೆ. ನನ್ನ ಜೀವನಕ್ಕೆ ಅವರೊಬ್ಬ ಸುಯೋಗ್ಯ ಮಾರ್ಗದರ್ಶಿಯಾಗಿದ್ದರು. ನಾನು ಅವರ ಶಿಷ್ಯನೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ.

ಶ್ರೀ ಟಿ. ನಾರಾಯಣ ಎಂ. ಪೈ, ಮಣಿಪಾಲ

* * *

ಶ್ರೀ ಪುಂಡಲೀಕ ಶೆಣ್ಯೈಯವರ ನಿಧನದ ಬಳಿಕ ಅವರ ಸ್ತುತ್ಯ ಕಾರ್ಯವನ್ನು ಅವರ ಅಣ್ಣನ ಮಗನಾದ ಶ್ರೀ ಪಾಂಡುರಂಗ ವಿ. ಶೆಣ್ಯೈಯವರು ಮುಂದುವರಿಸಿದರು. ಆ ಬಳಿಕ ''ಶ್ರೀ ಯು. ಪುಂಡಲೀಕ ಶೆಣ್ಯೈ ಮೆಮೋರಿಯಲ್ ಟ್ರಸ್ಟ್'' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು ಇದೀಗ ಸಂಸ್ಥೆ ಶ್ರೀ ಪುಂಡಲೀಕ ಶೆಣ್ಯೈಯವರ ಜೀವಿತೋದ್ದೇಶವನ್ನು ಮುಂದುವರಿಸಿಕೊಂಡು ಹೋಗಲು ಯತ್ನಿಸುತ್ತಿದೆ. ●

Sri Vidyabharathi Book Centre, Sringeri

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನ ಬೆಳ್ಳಿ ಹಬ್ಬದ ನಿರ್ದೇಶಕನ ಮಂಡಳಿ (1965-66)



ಕುಳಿತವರು : ಎಡದಿಂದ ಶ್ರೀ ಯು. ಪುಂಡಲೀಕ ಶೆಣೈ, ಶ್ರೀ ವಿ. ವಿ. ಶ್ಯಾನುಭಾಗ ಶ್ರೀ ಪಿ. ವಿ. ನಾಯಕ್, ಶ್ರೀ ಯು. ಪಿ. ಎಸ್. ರಾಯ್ಕರ್, ಶ್ರೀ ಪಿ. ವಿ. ಕಾಮತ್.
ನಿಂತವರು ಎಡದಿಂದ : ಶ್ರೀ ಎ. ಜೆ. ಅಲ್ಸೆ , ಡಾ। ಕೆ. ಎಲ್. ಐತಾಳ್, ಶ್ರೀ ಟಿ. ಆರ್. ಯು. ಪೈ , ಶ್ರೀ ಪಿ. ಎಸ್. ಶೆಟ್ಟಿ,

CC-O. In Public Domain. Digitized by eGangotri
Sri Vidyabharathi Book Centre, Sringeri

KNOWLEDGE IS POWER



Prof. U. Ramachandra Rao the, then Chairman of Indian Space and Research Organisation delivering a speech. Late Sri U. Pundalik Shenoy (sitting in the extreeme right), looking on.

CC-O. In Public Domain. Digitized by eGangotri
thi Book Centre, Sringeri

CC-O. In Public Domain. Digitized by eGangotri

ವಿದ್ಯಾರಾಧಕ – ದಿವಂಗತ ಯು. ಪುಂಡಲೀಕ ಶೆಣ್ಯೈ (ಒಂದು ದಿವ್ಯ ಸ್ಮರಣೆ)

– ಶ್ರೀ ಕೆ. ರಮೇಶ ಅಚ್ಯುತ ಪೈ, ಉಡುಪಿ

[ತನ್ನ ಜೀವನದುದ್ದಕ್ಕೂ ತಾನು ಗಳಿಸಿದ ವಿದ್ಯೆಯನ್ನು ಇತರರಿಗೆ ದಾನ ಮಾಡಿ ಎಷ್ಟೋ ವಿದ್ಯಾರ್ಥಿಗಳ ಜೀವನದಲ್ಲಿ ಶೈಕ್ಷಣಿಕ ಅಭಿವೃದ್ಧಿಯನ್ನು ದೊರಕಿಸಿಕೊಟ್ಟು ಅವರ ಉತ್ಕರ್ಷಕ್ಕೆ ಕಾರಣರಾದ ಉಡುಪಿಯ ಶ್ರೀ ಜೋಗಪ್ಪ ಶ್ಯಾನುಭಾಗರ ಕುಟುಂಬಕ್ಕೆ ಸಂಬಂಧಿಸಿದ ಶ್ರೀ ಯು. ಪುಂಡಲೀಕ ಶೆಣ್ಯೈಯವರು ನಿಧನ ಹೊಂದಿ ಈ ವರುಷ (25-12-2000 ರಂದು) 25 ವರ್ಷಗಳು ಸಲ್ಲುತ್ತವೆ. ಈ ಅವಸರದಲ್ಲಿ ಅವರು ನಡೆದು ಹೋದ ದಾರಿ, ಅವರು ಎತ್ತಿ ಹಿಡಿದ ಜೀವನದ ಮೌಲ್ಯಗಳು ಈ ಬಗ್ಗೆ ಒಂದು ಸಂಕ್ಷಿಪ್ತ ವಿವರಣೆಯನ್ನು ಈ ಲೇಖನದಲ್ಲಿ ಕೊಡಲಾಗಿದೆ.]

1896 ರಲ್ಲಿ ಶ್ರೀ ಪುಂಡಲೀಕ ಶೆಣ್ಯೈಯವರು ಉಡುಪಿಯ ಗೌಡಸಾರಸ್ವತ ಬ್ರಾಹ್ಮಣರ ಒಂದು ಕುಲೀನ ಕುಟುಂಬದಲ್ಲಿ ಜನ್ಮ ತಳೆದರು. ಅವರ ತಂದೆ ಶ್ರೀ ಜೋಗಪ್ಪ ಶ್ಯಾನುಭಾಗರು. ಕುಟುಂಬದಲ್ಲಿ ಆರ್ಥಿಕ ಅಡಚಣೆ ಇದ್ದರೂ ಕೂಡ ಪುಂಡಲೀಕ ಶೆಣ್ಯೈಯವರು ಏಕಾಗ್ರ ಚಿತ್ತದಿಂದ ತಮ್ಮ ಶಿಕ್ಷಣವನ್ನು ಮುಂದುವರಿಸಿ ಬಿ.ಎ. ಡಿಗ್ರಿಯನ್ನು ಸಂಪಾದಿಸಿ ಆ ಬಳಿಕ ಶಿಕ್ಷಕರಾಗಿ ತನ್ನ ಜೀವನವನ್ನು ನಡೆಸಬೇಕೆಂಬ ಉದ್ದೇಶದಿಂದ ಪ್ರೇರಿತರಾಗಿ ಶಿಕ್ಷಕ ವೃತ್ತಿಗೆ ಸಂಬಂಧಪಟ್ಟ L.T. ಪದವಿಯನ್ನೂ ಸಂಪಾದಿಸಿಕೊಂಡು, ತನ್ನ ಶಿಕ್ಷಕ ವೃತ್ತಿಯನ್ನು ತಾನು ಕಲಿತ ಉಡುಪಿಯ ಹೆಸರಾಂತ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿಯೇ ಆರಂಭಿಸಿದರು. ಉತ್ತಮ ಶಿಕ್ಷಕರೆಂಬ ಖ್ಯಾತಿಯನ್ನೂ ಹೊಂದಿದರು. ಸುಮಾರು 27 ವರ್ಷಗಳಷ್ಟು ಕಾಲ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿಯೇ ವಿಜ್ಞಾನ, ಗಣಿತ, ಇಂಗ್ಲಿಷ್ ಮುಂತಾದ ಪಾಠಗಳನ್ನು ಮಕ್ಕಳಿಗೆ ಕಲಿಸಿಕೊಟ್ಟು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಅಭಿವೃದ್ಧಿ ಪಥದಲ್ಲೂ, ಕಲಿಕೆಯಲ್ಲಿ ಮೊದಲೇ ಬುದ್ಧಿವಂತರಾದ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯಲ್ಲಿ ಅತ್ಯುಚ್ಚ ಅಂಕಗಳನ್ನು ಗಳಿಸಿ ಕೀರ್ತಿವಂತರಾಗುವಂತೆಯೂ ಸಹಕರಿಸಿದರು. 1956 ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದ ಬಳಿಕ ತೆಂಕಪೇಟೆಯ ಶ್ರೀ ಸೋದೆಮಠ ರಸ್ತೆಯಲ್ಲಿರುವ ತಮ್ಮ ಮನೆಯಲ್ಲಿ ತನ್ನ ಜೀವನದ

Sri Vidyabharathi Book Centre, Sringeri

CC-O. In Public Domain. Digitized by eGangotri
ಕೊನೆಯ ಕ್ಷಣಗಳ ತನಕವೂ ವಿದ್ಯಾರ್ಥಿಗಳ ಸಮುದಾಯಕ್ಕೆ ಯಾವ ಫಲಾಪೇಕ್ಷೆಯೂ ಇಲ್ಲದೆ ನಿಃಶುಲ್ಕವಾಗಿ ಹಾಗೂ ನಿಷ್ಕಳಂಕ ಮನಸ್ಸಿನಿಂದ ಪಾಠ ಹೇಳಿಕೊಡುತ್ತಿದ್ದರು. ಅವರಿಂದ ಪಾಠ ಹೇಳಿಸಿಕೊಂಡ ಎಷ್ಟೋ ವಿದ್ಯಾರ್ಥಿಗಳು ಇವತ್ತು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದು ಪುಂಡಲೀಕ ಶೆಣೈಯವರ ಹೆಸರನ್ನು ಎತ್ತಿದಲ್ಲಿ ಭಕ್ತಿಪೂರ್ವಕವಾದ ನಮನಗಳನ್ನು ಅವರಿಗೆ ಸಲ್ಲಿಸುತ್ತಾ ಇದ್ದಾರೆ.

ಶಿಸ್ತಿನ ಪಾಲನೆ

ಪ್ರತಿಯೊಂದು ವಿದ್ಯಾರ್ಥಿ ತಂಡದವರಿಗೆ ವಾರದ ಎಷ್ಟು ದಿನಗಳಲ್ಲಿ ಅವರು ಪಾಠವನ್ನು ಕಲಿಯಲು ಬರಬೇಕು, ದಿನದ ಯಾವ ಹೊತ್ತಿನಲ್ಲಿ ಅವರು ಬರಬೇಕು ಎಂದು ಮುಂಚಿತವಾಗಿ ತಿಳಿಸುತ್ತಿದ್ದರು. ಅದನ್ನು ಕಟ್ಟುನಿಟ್ಟಾಗಿ ಚಾಚೂ ತಪ್ಪದೆ ಪಾಲಿಸುವ ಜವಾಬ್ದಾರಿ ವಿದ್ಯಾರ್ಥಿಗಳದ್ದು. ನಿಯಮ ಪಾಲನೆಯನ್ನು ಮಾಡಲು ತಪ್ಪಿದಲ್ಲಿ ಪುಂಡಲೀಕ ಶೆಣೈಯವರು ನೊಂದುಕೊಳ್ಳುತ್ತಿದ್ದರು. ಪಾಠದ ಮೇಲೆ ಅಭಿರುಚಿಯೇ ಇಲ್ಲದೆ ಯಾವತ್ತೂ ಶ್ರಮವನ್ನು ವಹಿಸದೆ ಪಾಠ ಕಲಿಯಲು ಬಂದಲ್ಲಿ ಮತ್ತಷ್ಟೂ ನೊಂದುಕೊಳ್ಳುತ್ತಿದ್ದರು. ಕೆಲವು ಬಾರಿ ಉಗ್ರರೂಪ ತಾಳಿ ವಿದ್ಯಾರ್ಥಿಗಳ ಕಿವಿಯನ್ನು ಚೆನ್ನಾಗಿ ಹಿಂಡಿ ಅವರು ನಾಚಿಕೊಳ್ಳುವಂತೆ ಮಾಡುತ್ತಿದ್ದರು. ತಪ್ಪಿದ ಪಾಠವನ್ನು ಪುನರಪಿ ಪುನರಪಿ ಪುಸ್ತಕದಲ್ಲಿ ಬರೆದು ಅವರಿಗೆ ತೋರಿಸಬೇಕಾಗಿರುವ ಪ್ರಸಂಗಗಳೂ ಇರುತ್ತಿದ್ದವು. ಇದರಿಂದ ತಪ್ಪಿತಸ್ಥ ವಿದ್ಯಾರ್ಥಿಗಳು ಮಾತ್ರವಲ್ಲ, ಇತರ ವಿದ್ಯಾರ್ಥಿಗಳೂ ಶಿಸ್ತಿನ ಬಗ್ಗೆ ಗೌರವವನ್ನು ತೋರಿಸುವಂತೆ ಮಾಡುತ್ತಿದ್ದರು. ಶಿಕ್ಷೆ ಶಿಕ್ಷೆಗಾಗಿ ಅಲ್ಲ. ವಿದ್ಯಾರ್ಥಿಗಳ ಮನಸ್ಸನ್ನು ಬದಲಾಯಿಸಿ ಅದು ಪಾಠದ ಕಡೆ, ವ್ಯಾಸಂಗದ ಕಡೆ ವಾಲುವಂತೆ ಮಾಡಲು ಈ ಶಿಕ್ಷೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದರು. ಶಿಕ್ಷಕರಿಗೆ ವಿದ್ಯಾರ್ಥಿಗಳು ಮಕ್ಕಳ ಸಮಾನರು. ಹೇಗೆ ತಂದೆ ತಾಯಂದಿರು ತಮ್ಮ ಮಕ್ಕಳ ಅಭಿವೃದ್ಧಿಯನ್ನು ಸದಾ ಬಯಸುತ್ತಿರುತ್ತಾರೋ ಹಾಗೆ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಕಾಳಜಿ, ಮುತುವರ್ಜಿ ತೆಗೆದುಕೊಳ್ಳುವುದು ಅವರ ಧರ್ಮ ಎಂದೂ ಹೇಳುತ್ತಿದ್ದರು. ಇಂತಹ ಶಿಕ್ಷೆಗಳನ್ನು ಶಿಕ್ಷಕರು ಕೊಡುತ್ತಿರುವಾಗ ಅದರಲ್ಲಿ ಯಾವ ದುರುದ್ದೇಶವೂ ಇರದು, ಇರಕೂಡದು. ಅದೇ ರೀತಿಯಲ್ಲಿ ವಿದ್ಯಾರ್ಥಿಗಳೂ ಕೂಡ ತಾವು ಮಾಡಿದ ತಪ್ಪಿಗೆ ಶಿಕ್ಷಾರ್ಹರು ಎಂದು ತಿಳಿದುಕೊಳ್ಳಬೇಕು. ಇಂತಹ ಶಿಕ್ಷೆಯಿಂದ ಅವರ ರಕ್ಷೆ ಆಗುತ್ತದೆ ವಿನಹ ಅವರ ಅವನತಿಯಾಗುವುದಿಲ್ಲ ಎಂದು ಅವರೂ ಭಾವಿಸಬೇಕು ಎನ್ನುತ್ತಿದ್ದರು. ಪುಂಡಲೀಕ ಶೆಣೈಯವರ ಕೈಕೆಳಗೆ ಪಾಠವನ್ನು ಕಲಿತುಕೊಂಡ ಸಾವಿರಾರು ವಿದ್ಯಾರ್ಥಿಗಳು ಮುಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಠದಿಂದ ಪುಂಡಲೀಕ ಶೆಣ್ಯೆಯವರನ್ನು 'ಮಾಸ್ಟರ್ ಮಾಮ್' ಎಂದು ತಿಳಿಯುವುದಕ್ಕಿಂತ ಮುಖ್ಯವಾಗಿ ತಮ್ಮ 'ಗಾಡ್ ಫಾದರ್' ಎಂದು ಶುದ್ಧ ಮನಸ್ಸಿನಿಂದ ಭಾವಿಸುತ್ತಿದ್ದರು. ಹೀಗಾಗಿ ದಿ. ಪ್ರೊ। ಕೆ. ಎಸ್. ಹರಿದಾಸ ಭಟ್ಟರು ಶ್ರೀ ಪುಂಡಲೀಕ ಶೆಣ್ಯೆಯವರ ಬಗ್ಗೆ ಒಂದು ಲೇಖನವನ್ನು ಬರೆಯುವಾಗ – 'ಅವರು ಬ್ರಹ್ಮಚಾರಿಯಾಗಿದ್ದರೂ ಕೂಡ ಹಲವು ಮಕ್ಕಳ ತಂದೆ' ಎಂದು ಪ್ರಸಿದ್ಧರಾಗಿ ಕೀರ್ತಿಶೇಷರಾದರೆಂದು ಹೇಳಿರುತ್ತಾರೆ.

ಯಥಾರ್ಥ ಬೋಧನೆ

ಪುಂಡಲೀಕ ಶೆಣ್ಯೆಯವರು ಒಂದು ವಿಷಯವನ್ನು ಎತ್ತಿಕೊಂಡು ಪಾಠ ಹೇಳಿಕೊಡಲು ಆರಂಭಿಸಿದರೆ ಕಲಿತುಕೊಳ್ಳಬೇಕೆಂಬ ಹಂಬಲವಿರುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆ ವಿಷಯ ಅಚ್ಚಳಿಯದೆ ಉಳಿಯುತ್ತಿತ್ತು. ಏಕೆಂದರೆ ಯಾವ ತಪ್ಪೂ ಇಲ್ಲದೆ ಸರಿಯಾಗಿ, ಸ್ಪಷ್ಟವಾಗಿ ಪಾಠ ಹೇಳಿಕೊಡುವ ಉಪಾಧ್ಯಾಯರ ವರ್ಗಕ್ಕೆ ಸೇರಿದವರು ಅವರು. ಗಣಿತದಲ್ಲಿ ಅವರದ್ದು ಎತ್ತಿದ ಕೈ. ಬೀಜಗಣಿತ (Algebra), ರೇಖಾಗಣಿತ (Geometry)ದಲ್ಲಿ ಬರುವ ಗಹನವಾದ ಸಮಸ್ಯೆಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗಿ ವಿವರಿಸುತ್ತಿದ್ದರು. ಆ ಬಳಿಕ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ಯಾರ ಸಹಾಯವಿಲ್ಲದೆ ಗಣಿತಕ್ಕೆ ಸಂಬಂಧಪಟ್ಟ ಅಂಥ ಇತರ ಅನೇಕ ಸಮಸ್ಯೆಗಳನ್ನು ಲೀಲಾಜಾಲವಾಗಿ ಪರಿಹರಿಸಿಕೊಳ್ಳುವಂತೆ ಆಗುತ್ತಿತ್ತು.

ಪುಂಡಲೀಕ ಶೆಣ್ಯೆಯವರು ಆಗಾಗ್ಗೆ ಎಂಬಂತೆ ಹೇಳುತ್ತಿದ್ದರು.

I am a Teacher (Archaka)
School is my Temple (Devalaya)
Book is my God (Goddess Saraswati)
Teaching is my Worship (Aradhana)
Student's achievements is my Reward (Prasadam)

ಅವರ ಶರೀರ, ಮನಸ್ಸು, ಬುದ್ಧಿ, ಆತ್ಮ – ಇವೆಲ್ಲವೂ ಈ ವಿದ್ಯೆ, ಶಾಲೆ, ವಿದ್ಯಾರ್ಥಿಗಳು, ಶಿಕ್ಷಣ ಇತ್ಯಾದಿ ವಿಷಯಗಳ ಸುತ್ತ ಜೀವಮಾನ ಪೂರ್ತಿ ತಿರುಗುತ್ತಲೇ ಇರುತ್ತಿದ್ದವು.

ಭಾಷಾ ನೈರ್ಮಲ್ಯ

ಭಾಷೆಯಲ್ಲಿ ಶುದ್ಧತೆ ಇರಬೇಕು. ಆಗಲೇ ಭಾಷೆಯ ಅಧಿದೇವತೆ ಆಗಿರುವ ಸರಸ್ವತಿ ದೇವಿಯ ಮನಸ್ಸು ಸಂಪ್ರೀತವಾಗುತ್ತದೆ ಎಂದು ಅವರ ಅಭಿಪ್ರಾಯ.

Sri Vidyabharathi Book Centre, Sringeri

CC-O. In Public Domain. Digitized by eGangotri
ವ್ಯಾಕರಣ ದೋಷಗಳಿಂದ ಪೂರಿತವಾದ ಯಾವುದೇ ಬರವಣಿಗೆ ಸರಸ್ವತಿ ದೇವಿಯ ಮುಖಾರವಿಂದದ ಮೇಲೆ ಕಲೆಗಳನ್ನು ಮೂಡಿಸುತ್ತವೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದರು. ಎಷ್ಟೋ ಜನರು – ಅವರಲ್ಲಿ ಕಲಿತವರಾಗಲಿ, ಕಲಿಯದಿದ್ದವರಾಗಲಿ ಇಂಗ್ಲಿಷ್‌ನಲ್ಲಿ ಬರೆದ ಲೇಖನಗಳನ್ನು ಮುದ್ರಣಕ್ಕೆ ಮೊದಲು ಅವರ ಬಳಿ ತಂದು ಕೊಟ್ಟು, ಅದನ್ನು ಅವರು ತಿದ್ದಿದ ಮೇಲೆಯೇ, ಓದಿ ಸಂತೋಷಪಟ್ಟು ಅನಂತರ ಮುದ್ರಣಕ್ಕೆ ಕಳುಹಿಸಿ ಕೊಡುತ್ತಿದ್ದರು. ಅವರು ಕೆಂಪು ಶಾಯಿಯಿಂದ ತಿದ್ದಿದರೆಂದರೆ ಇಡೀ ಲೇಖನ ಕೆಲವೊಮ್ಮೆ ಕೆಂಪು ಶಾಯಿಯಿಂದಲೇ ಬರೆದಿರಬೇಕೋ ಏನೋ ಎಂಬ ಭಾವನೆಯನ್ನು ಮೂಡಿಸುತ್ತಿತ್ತು. ಈ ವ್ಯಾಕರಣ ದೋಷ, ಭಾಷಾ ಮಲಿನತೆಯಿಂದಾಗಿ ದುಃಖಿತರಾಗಿ ನಮ್ಮ ಜನರಿಗೆ ಶುದ್ಧವಾದ ಇಂಗ್ಲಿಷ್ ಭಾಷೆ ಬೇಕೆಂದಾದರೆ, ಭಾಷೆಯ ಯಾವತ್ತು ಆ ಅಮೂಲ್ಯವಾದ ವ್ಯಾಕರಣ ವಿದೆಯೋ, ಅದನ್ನು ಚೆನ್ನಾಗಿ ತಿಳಿದುಕೊಳ್ಳುವಂತಾಗಲಿ ಎಂದು ತುಂಬಾ ಶ್ರಮವನ್ನು ವಹಿಸಿ, ಪಾಠ ಕಲಿಸಿಕೊಡುವ ಸಮಯದಲ್ಲೂ ಕೂಡ ಸ್ವಲ್ಪ ಸಮಯವನ್ನು ಉಪಯೋಗಿಸಿ ಇಂಗ್ಲಿಷ್ ವ್ಯಾಕರಣದ ಬಗ್ಗೆ – 'ಇಂಗ್ಲಿಷ್ ಕನ್ನಡ ಬೋಧಿನಿ' Part I ಮತ್ತು Part II ಹೊತ್ತಗೆಯನ್ನು ಹೊರ ತಂದರು. ದಿನನಿತ್ಯವೂ ನಾವು ನಮ್ಮ (ಇಂಗ್ಲಿಷ್) ಭಾಷೆಯಲ್ಲಿ, ಬರವಣಿಗೆಯಲ್ಲಿ ಮಾಡುತ್ತಿರುವ ವ್ಯಾಕರಣದ ತಪ್ಪುಗಳನ್ನು ಅಲ್ಲಲ್ಲಿ ಎತ್ತಿ ತೋರಿಸಿ ಅದು ಹೇಗೆ ಸರಿಯಾಗಿರಬೇಕೆಂದು ಹೇಳಿಕೊಡುತ್ತಿದ್ದರು ಮತ್ತು ಏಕೆ ಹಾಗೆಯೇ ಆಗಬೇಕೆಂದು ಸ್ಪಷ್ಟ ನುಡಿಗಳಲ್ಲಿ ತಿಳಿಸುತ್ತಿದ್ದರು.

ನಿಸ್ವಾರ್ಥತೆ

ಯಾವ ಫಲಾಪೇಕ್ಷೆಯೂ ಇಲ್ಲದೆ, ಯಾವ ಸ್ವಾರ್ಥಕ್ಕೂ ಎಡೆಗೊಡದೆ ಆತ್ಮಸಂತೋಷ, ತೃಪ್ತಿಗಾಗಿ ಮಾತ್ರ ವಿದ್ಯೆಯನ್ನು ದಾನಮಾಡಿ ಕೊಡುತ್ತಿದ್ದರು. ಯಾವೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯಿಂದಲೂ ಯಾವ ಸಂದರ್ಭದಲ್ಲೂ ಕೂಡ ಯಾವ ಶುಲ್ಕವನ್ನೂ ಮಾತ್ರವಲ್ಲ, ಯಾವತ್ತೂ ಉಡುಗೊರೆಯನ್ನು ಗುರುಕಾಣಿಕೆಯ ರೂಪದಲ್ಲಿ ಕೊಟ್ಟರೂ ಕೂಡ ಅದನ್ನು ಅವರು ಸ್ವೀಕರಿಸುತ್ತಿರಲಿಲ್ಲ. ಬದಲಾಗಿ ಅಂಥ ಸಂದರ್ಭಗಳು ಬಂದಲ್ಲಿ – 'ಅಯ್ಯೋ ದೇವರೆ ಇದೆಲ್ಲ ಯಾಕೆ ಮಾಡುತ್ತಿದ್ದೀರಿ' ಎಂದು ನೊಂದು ಚಡಪಡಿಸುತ್ತಿದ್ದರು. ಶ್ರೀಮಂತ ಮನೆತನದವರ ಮಕ್ಕಳೂ ಕೂಡ ಅವರಿಂದ ಪಾಠ ಕಲಿಸಿಕೊಂಡು ಅವರು ತಮ್ಮ ತಮ್ಮ ಕ್ಲಾಸಿನ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ಗುರುಗಳಿಗೆ ನಮನವನ್ನು ಸಲ್ಲಿಸಲು ಹಾಗೂ ಉಪಕಾರ ಸ್ಮರಣೆಯನ್ನು ಮಾಡಲು ಅವರಲ್ಲಿಗೆ ಬರುತ್ತಿದ್ದರು. ಓರ್ವ ಶ್ರೀಮಂತನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಗಳು S.S.L.C.ಯಲ್ಲಿ (ಇಂಗ್ಲಿಷ್ ಅಥವಾ ಗಣಿತ) ಪಾಠದಲ್ಲಿ ಎರಡೆರಡು ಬಾರಿ ಕುಳಿತುಕೊಂಡು ಉತ್ತೀರ್ಣಳಾಗದೆ ಪುಂಡಲೀಕ ಶೆಣ್ಯೆಯವರಲ್ಲಿ ಪಾಠಕ್ಕಾಗಿ ಬರುತ್ತಿದ್ದಳು. ಪುಂಡಲೀಕ ಶೆಣ್ಯೆಯವರಿಂದ ಪಾಠ ಕೇಳಿಕೊಂಡ ನಂತರ ಅವಳು ಆ ವಿಷಯ (Subject)ದಲ್ಲಿ ತೇರ್ಗಡೆ ಹೊಂದಿ ತನ್ನ S.S.L.C. ಕೋರ್ಸನ್ನು ಪರಿಸಮಾಪ್ತಿಗೊಳಿಸಿದಳಂತೆ. ಯಾವ ಶುಲ್ಕವನ್ನೂ ತೆಗೆದುಕೊಳ್ಳಲು ಶ್ರೀ ಪುಂಡಲೀಕ ಶೆಣ್ಯೆಯವರು ನಿರಾಕರಿಸುತ್ತಿದ್ದುದರಿಂದ ಅವಳು ತನ್ನ ತಂದೆಯನ್ನು ಕೂಡಿಕೊಂಡು ತಾನು ಪಾಸಾಗಿದ್ದೇನೆಂದು ತಿಳಿಸಲು ಪುಂಡಲೀಕ ಶೆಣ್ಯೆಯವರ ಮನೆಗೆ ಬಂದಿದ್ದಳಂತೆ. ಬರುವಾಗ ಒಂದು ಹರಿವಾಣದಲ್ಲಿ ಹಣ್ಣು ಹಂಪಲುಗಳನ್ನು ಇರಿಸಿ ಇದು ತನ್ನ ಚಿಕ್ಕ ಗುರುಕಾಣಿಕೆ ಎಂದು ಶ್ರೀ ಪುಂಡಲೀಕ ಶೆಣ್ಯೆಯವರ ಬಳಿ ಇಟ್ಟಳಂತೆ. ಶ್ರೀ ಪುಂಡಲೀಕ ಶೆಣ್ಯೆಯವರು ತಾನದನ್ನು ಸ್ವೀಕರಿಸುವುದಿಲ್ಲವೆಂದು ಅವಳೊಡನೆಯೂ ಅವಳ ತಂದೆಯೊಡನೆಯೂ ತಿಳಿಸಿದಾಗ ವಿದ್ಯಾರ್ಥಿನಿ ಬಹಳ ದುಃಖಿತಳಾಗಿ ಅತ್ತುಬಿಟ್ಟಳಂತೆ. ಇದನ್ನು ನೋಡಿದ ಪುಂಡಲೀಕ ಶೆಣ್ಯೆಯವರು ಆ ಹರಿವಾಣವನ್ನು ಕೈಗೆ ತೆಗೆದುಕೊಂಡು ಅದರಲ್ಲಿರುವ ಒಂದು ಚಿಕ್ಕ ಹಣ್ಣನ್ನು (ದ್ರಾಕ್ಷಿ) ತೆಗೆದು ಅವರ ಸಮ್ಮುಖದಲ್ಲಿ ತನ್ನ ಬಾಯಿಗೆ ಹಾಕಿಕೊಂಡು ಬಳಿಕ ಆ ಇಡೀ ಹರಿವಾಣವನ್ನು ಆ ಹುಡುಗಿಯ ಕೈಗೆ ಕೊಡುತ್ತಾ, ಇದು ಈಗ ಗುರುಗಳು ಶಿಷ್ಯೆಗೆ ಕೊಡುವ ಕಾಣಿಕೆ. ಇದನ್ನು ಸ್ವೀಕರಿಸಿ ತನ್ನ ಸಹಪಾಠಿಗಳಿಗೆ ಹಂಚಿಕೊಡಲು ಹೇಳಿ ಆ ಹರಿವಾಣವನ್ನು ವಾಪಾಸು ಅವಳ ತಂದೆಯ ಬಳಿ ಕೊಟ್ಟರಂತೆ.

ತಾನು ಶುಲ್ಕವನ್ನಾಗಲೀ, ಉಡುಗೊರೆಯನ್ನಾಗಲೀ ತೆಗೆದುಕೊಳ್ಳುತ್ತಿರಲಿಲ್ಲವಾದರೂ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ತನ್ನ ಸ್ವಂತ ಸಂಪಾದನೆಯ ಹಣವನ್ನು ವಿದ್ಯಾಭ್ಯಾಸಕ್ಕಾಗಿ ದಾನ ಮಾಡಿ ಕೊಡುತ್ತಿದ್ದರು. ಕೆಲವು ಬಡ ವಿದ್ಯಾರ್ಥಿಗಳಿಗೆ ತನ್ನ ವಾಸ್ತವ್ಯದ ಮನೆಯಲ್ಲೇ, ವ್ಯಾಸಂಗ ಮುಗಿಯುವ ತನಕ ಉಳಕೊಳ್ಳುವಂತೆ ಒತ್ತಾಯಿಸಿ, ಅವರನ್ನು ತಮ್ಮಲ್ಲಿಯೇ ನಿಲ್ಲಿಸಿಕೊಂಡ ಸಂದರ್ಭಗಳೂ ಇವೆ. ಅಂತಹ ವಿದ್ಯಾರ್ಥಿಗಳ ಮನಸ್ಸು ವಿದ್ಯೆಯ ಮೇಲೆಯೇ ಇರಬೇಕೆನ್ನುವ ಹಂಬಲದಿಂದ ತಾನೇ ಸ್ವತಃ ಹೊಟೇಲಿಗೆ ಹೋಗಿ ಅವರಿಗಾಗಿ ತಿಂಡಿ-ತಿನಿಸು, ಕಾಫಿ ಇತ್ಯಾದಿ ಯನ್ನು ತಂದುಕೊಡುವ ಜವಾಬ್ದಾರಿಯನ್ನು ಅವರೇ ಹೊತ್ತ ಸಂದರ್ಭಗಳೂ ಇವೆ. ಒಬ್ಬ ವಿದ್ಯಾರ್ಥಿ ಅವಿಶ್ರಾಂತವಾಗಿ ಅವರ ಕೆಳಗೆ ಪಾಠವನ್ನು ಕಲಿತುಕೊಂಡು ತನ್ನ S.S.L.C.ಯನ್ನು ಅತೀ ಉಚ್ಚ ಅಂಕವನ್ನು ಪಡೆದುಕೊಳ್ಳುವುದರ ಜೊತೆಗೆ ಪಾಸು ಮಾಡಿದ್ದನಂತೆ. ಆದರಿಂದ ಶ್ರೀ ಪುಂಡಲೀಕ ಶೆಣ್ಯೆಯವರು ಆನಂದಿತರಾಗಿ ಆ ವಿದ್ಯಾರ್ಥಿಯ ಬಗ್ಗೆ ಶ್ರೀ T. A. Pai (SyndicateBank) ಮತ್ತು ಶ್ರೀ C. E.

Sri Vidyabharathi Book Centre, Sringeri

CC-O. In Public Domain. Digitized by eGangotri
Kamath (Canara Bank) ಅವರ ಬಳಿ ಹೋಗಿ – ಬಡ ಕುಟುಂಬದವ, ಬಹಳ ಬುದ್ಧಿವಂತ, ಅಹರ್ನಿಶಿ ಎಂಬಂತೆ ಓದಿ ಅತೀ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ವಿದ್ಯಾರ್ಥಿ. ಏನಾದರೂ ವ್ಯವಸ್ಥೆ ಮಾಡಿ ಅವನಿಗೆ ಒಂದು ಯೋಗ್ಯ ಹುದ್ದೆಯನ್ನು ಕೊಟ್ಟು ಅವನ ಸಂಸಾರವನ್ನು ಸಂರಕ್ಷಣೆ ಮಾಡಬೇಕೆಂದು ಕೇಳಿಕೊಂಡರಂತೆ. ಪುಂಡಲೀಕ ಶೆಣ್ಯೆಯವರ ಮನವಿಯನ್ನು ತಿರಸ್ಕರಿಸಲಾಗದೆ ಕೆನರಾ ಬ್ಯಾಂಕ್‌ನವರು ಅವನಿಗೆ ಒಂದು ಹುದ್ದೆಯನ್ನು ಕರುಣಿಸಿ ಕೊಟ್ಟರು. ಆ ವಿದ್ಯಾರ್ಥಿ ಅತೀ ದೊಡ್ಡ ಸ್ಥಾನವನ್ನು ಕೆನರಾ ಬ್ಯಾಂಕ್‌ನಲ್ಲಿ ಪಡೆದು ಇತ್ತೀಚೆಗೆ ನಿವೃತ್ತಿ ಹೊಂದಿದರು. ಶ್ರೀ ಪುಂಡಲೀಕ ಶೆಣ್ಯೆಯವರು ನನಗೆ ಪಿತೃ ಸಮಾನರು ಎಂದು ಇವತ್ತಿಗೂ ಹೇಳಿಕೊಂಡು ಅಂತಹ ಮಹಾನುಭಾವರ ಸಂಬಂಧ ನನಗೆ ಲಭ್ಯವಾದದ್ದು ನನ್ನ ಪುರಾಕೃತ ಪುಣ್ಯ ಎಂದು ಅವರು ಈಗಲೂ ಭಾವಿಸುತ್ತಾರೆ.

ಪುಂಡಲೀಕ ಶೆಣ್ಯೆಯವರ ಬಗ್ಗೆ ಬರೆದ ಒಂದು ಲೇಖನದಲ್ಲಿ ಅವರು ಈ ರೀತಿ ಹೇಳಿದ್ದಾರೆ. After my victory in matriculation Sri Pundalika Shenoy was jubilant. He taught me one more Truth of human life. Inspiration without perspiration remains only aspiration and perspiration without inspiration becomes a desperation.

ಆ ವಿದ್ಯಾರ್ಥಿ ಅವರ ಲೇಖನದ ಅಂತ್ಯದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ.

I remain ever indebted and can never repay his debt as he has left this world and therefore I remember him daily till I leave this world.

ಪ್ರಾಮಾಣಿಕತೆ ಮತ್ತು ನಿಸ್ಪೃಹತೆ

ವೇದವಾಕ್ಯಕ್ಕೆ ಸಮಾನವಾದ ಒಂದು ಉಕ್ತಿ ಇಂಗ್ಲಿಷ್‌ನಲ್ಲಿಯೂ ಇದೆ. ಅದು ಹೀಗಿದೆ:

"Honesty is the Best Policy."

ಅದೇ ವಿಷಯದ ಬಗ್ಗೆ ಮಾನ್ಯ Keith De. Souza ತಮ್ಮ ವಿಚಾರವನ್ನು ಈ ರೀತಿ ಹೇಳಿದ್ದಾರೆ.

Whatever the task that has to be done
Always dedicated, sincere, honest be;
For life's noblest, silent victories are won,
By the man who values his "INTEGRITY".

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನವನ್ನು ನಿರ್ಭೀತಿಯಿಂದಲೂ, ನೆಮ್ಮದಿಯಿಂದಲೂ ಸಾಗಿಸಲು ಬೇಕಾಗಿರುವ ಮುಖ್ಯ ವಸ್ತುವೆಂದರೆ ಪ್ರಾಮಾಣಿಕತೆ ಮತ್ತು ನಿಸ್ಪೃಹತೆ. (Honesty and Integrity). ಅದಕ್ಕಾಗಿಯೇ ಅದೊಂದು ಸುಯೋಗ್ಯ ಕಾರ್ಯನೀತಿ ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ವಿಜಯೋತ್ಸವವನ್ನು ನಿತ್ಯ ನಿರಂತರವಾಗಿ ಆಚರಿಸಬಹುದೆಂದು ಕೀತ್ ಡಿಸೋಜ ಮುಕ್ತ ಕಂಠದಿಂದ ಹೇಳಿದ್ದಾರೆ.

ಇಂತಹ ಅಮೂಲ್ಯ ವಸ್ತು ಶ್ರೀ ಪುಂಡಲೀಕ ಶೆಣೈಯವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ತಿದ್ದುವುದರಲ್ಲಿ ಯಾರಿಂದಲೂ, ಯಾವತ್ತಾದರೂ ಏನನ್ನೂ ಕೊಂಡುಕೊಳ್ಳುವುದಾಗಲಿ ಅಥವಾ ಯಾರಿಗೂ ಯಾವತ್ತೂ ಸಂದರ್ಭದಲ್ಲಿ ಋಣಕ್ಕೆ ಹಾಕಿಕೊಳ್ಳುವುದಾಗಲಿ ಅವರಿಂದ ಸಾಧ್ಯವಾಗದ ವಿಷಯ; ಅಂತಹ ಧೀಮಂತ ವ್ಯಕ್ತಿತ್ವ ಅವರದು. ಉತ್ತರ ಪತ್ರಿಕೆಗಳನ್ನು ತಿದ್ದಲು ಅವರಿಗೆ ಕಳುಹಿಸಿ ಕೊಡಲಾಗಿದೆ ಎಂದು ಗೊತ್ತಾದ ಕೂಡಲೇ ಸಂಬಂಧಪಟ್ಟ ಕೆಲವು ವಿದ್ಯಾರ್ಥಿಗಳ ತಂದೆ ತಾಯಂದಿರು, ಬಂಧು ಬಳಗದವರು ಅವರನ್ನು ಭೇಟಿ ಮಾಡಿ – ದಯ ತೋರಿಸಬೇಕು. ಅರ್ಥಾತ್ ತಮ್ಮ ಮಕ್ಕಳನ್ನು ಏನಾದರೂ ಮಾಡಿ ಪಾಸ್ ಮಾಡಿಸಬೇಕು ಎಂದು ಅಂಗಲಾಚಿಕೊಂಡರೂ ಕೂಡಾ ಶ್ರೀ ಪುಂಡಲೀಕ ಶೆಣೈಯವರು – ಅದು ನನ್ನಿಂದ ಖಂಡಿತ ಸಾಧ್ಯವಿಲ್ಲ. ನಿಮ್ಮ ಮಗ ಅಥವಾ ಮಗಳು ಸಮರ್ಪಕ ಉತ್ತರ ಕೊಟ್ಟರೆ ಮಾತ್ರ ಅದಕ್ಕೆ ನಿಗದಿ ಪಡಿಸಿದ ಅಂಕಗಳನ್ನು ಕೊಡಬಲ್ಲೆ. ಅದಕ್ಕಿಂತ ಜಾಸ್ತಿ ನನ್ನಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಖಂಡತುಂಡವಾಗಿ ಹೇಳಿ ಬಿಡುತ್ತಿದ್ದರು. ಏಕೆಂದರೆ ಅನರ್ಹತೆಯನ್ನು ಅರ್ಹತೆ ಎಂದು ಸುಳ್ಳುಮಾಡುವ ವಿಚಾರ ಅವರಿಗಿಲ್ಲ. ಆ ನಡತೆ ದೋಷ ಪೂರಿತವೆಂದು ನಿಶ್ಚಲವಾಗಿ ನಂಬುತ್ತಿದ್ದರು. ಕೆಲವೊಮ್ಮೆ ಉತ್ತರ ಪತ್ರಿಕೆಗಳನ್ನು ಕಳುಹಿಸಿಕೊಟ್ಟ ಸಂಸ್ಥೆ ಯವರೇ ಬಂದು ಇಂತಿಂಥ ವಿದ್ಯಾರ್ಥಿಗಳಿಗೆ ಸಹಕಾರವನ್ನು ಕೊಡಬೇಕು ಎಂದು ಕೇಳಿಕೊಂಡಾಗ ತುಂಬ ನೊಂದುಕೊಂಡು ಉತ್ತರ ಪತ್ರಿಕೆಗಳ ಕಟ್ಟನ್ನೇ ವಾಪಾಸು ಕೊಟ್ಟು ಈ ಕೆಲಸವನ್ನು ಬೇರೆಯವರಿಗೆ ವಹಿಸಿಕೊಡುವಂತೆ ಹೇಳುತ್ತಿದ್ದರು.

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲ್‌ನಲ್ಲಿ ಅಸಿಸ್ಟೆಂಟ್ ಹೆಡ್‌ಮಾಸ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಆವಾಗ ಯಾವುದೋ ಒಂದು ವಿಷಯದಲ್ಲಿ ಶಾಲೆಯ ಆಗಿನ ಹೆಡ್‌ಮಾಸ್ಟರ್ ಜೊತೆ ಕೆಲವೊಂದು ಭಿನ್ನಾಭಿಪ್ರಾಯಗಳಿಗಾಗಿ ತನ್ನ 55ನೇ ವಯಸ್ಸಿನಲ್ಲಿ ಆ ಶಾಲೆಯಿಂದ ನಿವೃತ್ತಿಯನ್ನು ಪಡೆದುಕೊಂಡರು. ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲ್ ಅವರು ಕಲಿತ ಶಾಲೆ. ಡಿಗ್ರಿ ಸಂಪಾದನೆ ಆದ ಬಳಿಕ ಶಿಕ್ಷಕರಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri
ಸೇವೆ ಸಲ್ಲಿಸಿದ ಶಾಲೆ. ಆ ಶಾಲೆ ಅವರಿಗೆ ಪರಮೋಚ್ಚ ವಿದ್ಯಾಮಂದಿರ ಮತ್ತು ಅವರ ಜೀವಾಳ ಹಾಗೂ ಉಸಿರಿನ ಉಸಿರು. ಹಾಗಿರುವಾಗ ಮನಸ್ಸಿಲ್ಲದ ಮನಸ್ಸಿನಿಂದ ಆ ಶಾಲೆಯನ್ನು ಬಿಟ್ಟು ಮಣಿಪಾಲ ಹೈಸ್ಕೂಲ್‌ನ್ನು ಸೇರಿ ಅಲ್ಲಿ ತನ್ನ ಶಿಕ್ಷಕ ವೃತ್ತಿಯನ್ನು ಮುಂದುವರಿಸಿ ತಮ್ಮ 60ನೇ ವಯಸ್ಸಿನಲ್ಲಿ ಮಣಿಪಾಲ ಹೈಸ್ಕೂಲ್‌ನಿಂದ ನಿವೃತ್ತಿ ಪಡೆದರು. ಮಣಿಪಾಲ ಹೈಸ್ಕೂಲ್‌ನಲ್ಲಿ ಅವರಿಗೆ ಸಿಗುತ್ತಿರುವ ಸಂಬಳ, ಕ್ರಿಶ್ಚಿಯನ್ ಹೈಸ್ಕೂಲ್‌ನಲ್ಲಿ ಸಿಗುತ್ತಿರುವ ಸಂಬಳಕ್ಕಿಂತ ಜಾಸ್ತಿಯಾಗಿರುತ್ತಿತ್ತು. ತಾನು ಮಣಿಪಾಲ್ ಹೈಸ್ಕೂಲ್‌ನ್ನು ಸೇರಿದ್ದು ಸಂಬಳ ಜಾಸ್ತಿ ಪಡೆಯಲು ಅಲ್ಲ, ಆದರೆ ಕ್ರಿಶ್ಚಿಯನ್ ಹೈಸ್ಕೂಲ್‌ನ್ನು ಬಿಟ್ಟದ್ದು ಸನ್ನಿವೇಶಗಳ ಒತ್ತಡದಿಂದ ಎಂಬ ವಿಷಯ ಜನರಿಗೆ ತಿಳಿಯುವಂತಾಗಲಿ ಎಂದು, ಅವರು ಹೆಚ್ಚಿಗೆ ಸಿಕ್ಕಿದ ಸಂಬಳವನ್ನು ಸ್ಥಳೀಯ ಕಾಲೇಜು ಒಂದಕ್ಕೆ ವಂತಿಗೆಯ ರೂಪದಲ್ಲಿ ದಾನ ಮಾಡಿ ಕೊಟ್ಟರು. ಈ ವಿಷಯವನ್ನು ಅವರು ತಮ್ಮ ಒಂದು ಲೇಖನದಲ್ಲಿ ತಮ್ಮ ಸ್ಪಷ್ಟ ನುಡಿಗಳಲ್ಲಿ ತಿಳಿಸಿದ್ದಾರೆ.

"To show that I left the School by the force of circumstances and not to better my prospects, I donated to a local college an amount which I got in excess over what I would have got in this school, had I continued to serve it till the end."

ಸರಳ ಜೀವನ

ಶ್ರೀ ಪುಂಡಲೀಕ ಶೆಣ್ಯೆಯವರ ಆಚಾರ - ವಿಚಾರ, ಆಹಾರ - ವಿಹಾರ, ಉಡುಗೆ-ತೊಡುಗೆ, ನಡೆ - ನುಡಿ ಎಲ್ಲವೂ ಸರಳತೆಯನ್ನು ಬಿಟ್ಟು ಬೇರೆ ಯಾವುದನ್ನೂ ಸೂಚಿಸುತ್ತಿರಲಿಲ್ಲ.

ಶ್ರೀ ಯು. ಜಿ. ಶೆಣೈ (ಶ್ರೀ ಪುಂಡಲೀಕ ಶೆಣ್ಯೆಯವರ ಅತೀ ಸಮೀಪದ ಬಂಧು) ಅವರು ಶ್ರೀ ಪುಂಡಲೀಕ ಶೆಣ್ಯೆಯವರ ವಿಷಯದಲ್ಲಿ ಬರೆಯುವಾಗ ಹೀಗೆ ಹೇಳಿದ್ದಾರೆ:

He led a pucca Gandhian way of living. He used to wear Khadi dhothi, Khadi shirt, Khadi coat with Khadi topi (cap).

ಯಾವಾಗ ನೋಡಿದರೂ ಎಲ್ಲಿ ನೋಡಿದರೂ ಅವರು ಇದೇ ಉಡುಗೆ ಉಡುತ್ತಿದ್ದರು. ಇದಕ್ಕಿಂತ ಹೆಚ್ಚಾಗಿ ಎಂದರೆ ಕೊಡೆಯೊಂದನ್ನು ಬಗಲಲ್ಲಿ ಹಿಡಿದು ನಡೆಯುತ್ತಿದ್ದರು ಅಷ್ಟೆ. ಯಾವ ಆಡಂಬರವನ್ನೂ ಯಾವ ಸನ್ಮಾನವನ್ನೂ ಒಲ್ಲದ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಕ್ತಿ ಅವರು. ಒಮ್ಮೆ ಸ್ಥಳೀಯ ಸಂಸ್ಥೆಯೊಂದು ಅವರಿಗೊಂದು ಸನ್ಮಾನವನ್ನು ಮಾಡಬೇಕು ಎಂದು ನಿರ್ಧರಿಸಿ ಆ ಸನ್ಮಾನವನ್ನು ಸ್ವೀಕರಿಸಲು ಅವರನ್ನು ಆಹ್ವಾನಿಸಿದ್ದರು. ಎಷ್ಟು ಒತ್ತಾಯಿಸಿದರೂ ಒಪ್ಪದೆ ತನಗೆ ಯಾವ ಸನ್ಮಾನವೂ ಬೇಡ ಎಂದು ಹೇಳಿ ಕಳುಹಿಸಿದರು. ಸನ್ಮಾನ ಮಾಡುವ ಕಾರ್ಯಕರ್ತರಿಗೆ ಇಂತಹ ವ್ಯಕ್ತಿಯೊಬ್ಬರನ್ನು ಸನ್ಮಾನಿಸದೆ ಇರುವುದೆಂದರೆ ಅದೊಂದು ದೊಡ್ಡ ನ್ಯೂನತೆಯೆಂದು ಅವರ ಅಭಿಮತ. ಊರಿನ, ಸಮಾಜದ ಆದ್ಯ ಮಹನೀಯರುಗಳು ಕೂಡ ಅವರನ್ನು ಒತ್ತಾಯಿಸಿದರೂ ಅವರು ಮಣಿಯಲಿಲ್ಲ. ಆಗ ಅವರು ಶ್ರೀ ಪುಂಡಲೀಕ ಶೆಣೈಯವರೊಡನೆ ದುಃಖದ ಮನಸ್ಸಿನಿಂದ ಈ ರೀತಿ ಹೇಳಿದರಂತೆ – ನೀವು ಈ ಸನ್ಮಾನ ಸಮಾರಂಭಕ್ಕೆ ಬಾರದಿದ್ದರೆ ನಿಮಗಾಗಿ ವೇದಿಕೆಯಲ್ಲಿ ಕಾದಿರಿಸಿದ ಆಸನದ ಮೇಲೆ ನಿಮ್ಮ ಭಾವಚಿತ್ರವನ್ನು ಇಟ್ಟು ಅದಕ್ಕಾದರೂ ಸನ್ಮಾನ ಮಾಡಲು ಪರವಾನಿಗೆ ನೀಡಬೇಕೆಂದು ಕೇಳಿಕೊಂಡಾಗ ಶ್ರೀ ಪುಂಡಲೀಕ ಶೆಣೈಯವರು ಸ್ವಲ್ಪ ಹೆದರಿಕೊಂಡು ಹಾರ ಹಾಕಿಸಿಕೊಂಡು ಸನ್ಮಾನವನ್ನು ಸ್ವೀಕರಿಸಲು, ಅಂತರಾಳದಿಂದ ಒಪ್ಪದಿದ್ದರೂ ಬಾಹ್ಯಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಅಂತಹ ಸಮಾರಂಭದಲ್ಲಿ ಪಾಲ್ಗೊಂಡ ಸನ್ನಿವೇಶವೂ ಅವರ ಜೀವನದಲ್ಲಿ ಆಗಿ ಹೋಗಿದೆ. ಸನ್ಮಾನ ಸಮಾರಂಭದಲ್ಲಿ ಅವರಿಗೆ ಮಾತನಾಡಲು ಹೇಳಿದಾಗ – ''ನಾನು ಉಪಾಧ್ಯಾಯ ವೃತ್ತಿಯವನು. ಹಾಗಿದ್ದರೂ ನಾನು ಈಗಲೂ ವಿದ್ಯಾರ್ಥಿಯಾಗಿಯೇ ಇದ್ದೇನೆ. ಪ್ರತಿಯೊಬ್ಬ ಮನುಷ್ಯನು ಯಾವ ಸ್ಥಿತಿಯಲ್ಲಿಯೇ ಇರಲಿ ಅಥವಾ ಯಾವ ವಯಸ್ಸಿನಲ್ಲೇ ಇರಲಿ, ಅವನು ಈ ಜಗತ್ತಿನಿಂದ ಈ ಜೀವನದಲ್ಲಿ ಕಲಿತುಕೊಳ್ಳಬೇಕಾದುದು ಎಷ್ಟೋ ಇದೆ. ಅದು ಜೀವಮಾನ ಪರ್ಯಂತ ಮುಗಿಯುವಂತಿಲ್ಲ. ಆದ್ದರಿಂದ ಈ ಸೃಷ್ಟಿಯಲ್ಲಿ ಎಲ್ಲರೂ ವಿದ್ಯಾರ್ಥಿಗಳೇ, ನಾನು ನನ್ನ ಕೊನೆಯ ಉಸಿರಿನ ತನಕ ಒಬ್ಬ ವಿದ್ಯಾರ್ಥಿಯಾಗಿಯೇ ಇರಲು ಬಯಸುತ್ತೇನೆ.''

ಧರ್ಮ ಶ್ರದ್ಧೆ

ದೇವರು, ದೇವಸ್ಥಾನ, ಮಠ ಇವುಗಳಲ್ಲಿಗೆ ಶ್ರೀ ಪುಂಡಲೀಕ ಶೆಣೈಯವರು ಹೋದವರಲ್ಲ. ಆದರೆ ದೇವರು ಮತ್ತು ಧರ್ಮದಲ್ಲಿ ಅಪಾರವಾದ ಆಸ್ಥೆ, ವಿಶೇಷವಾದ ವಿಶ್ವಾಸ ಇಟ್ಟುಕೊಂಡವರು. ಗೌಡಸಾರಸ್ವತ ಬ್ರಾಹ್ಮಣ ಕುಟುಂಬದ ಪ್ರತಿಯೊಂದು ಗೋತ್ರದವರಿಗೆ ಪರಂಪರಾಗತವಾಗಿ ಪೂಜಿಸಿಕೊಂಡು ಬಂದಿರುವ ಕುಲದೇವರು ಇರುತ್ತಾರೆ. ಅಂತಹ ಕುಲದೇವರ ಮೂಲಸ್ಥಾನ ಸಾಮಾನ್ಯವಾಗಿ ಗೋವಾದಲ್ಲಿರುತ್ತದೆ. ಪುಂಡಲೀಕ ಶೆಣೈಯವರು ಕಂಶ ಗೋತ್ರೋತ್ಪನ್ನರು. ಕಂಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೋತ್ರದ ಗೌಡ ಸಾರಸ್ವತ ಬ್ರಾಹ್ಮಣ ಕುಟುಂಬದವರಿಗೆ ಗೋವಾದ ಕವಳೆಯಲ್ಲಿ ಪೂಜಿಸಲ್ಪಡುವ ಶ್ರೀ ಶಾಂತಾದುರ್ಗಾ ಕುಲದೇವತೆ. ತಮ್ಮ ಜಾಯಮಾನದಲ್ಲಿ ಒಂದಾವರ್ತಿಯಾದರೂ ಕುಲದೇವತೆಯ ದರ್ಶನ ಮಾಡಿ ಅಲ್ಲಿ ಅವಳ ಸೇವೆ ಮಾಡಿಕೊಂಡು ಬಾರದಿದ್ದರೆ ಆ ವ್ಯಕ್ತಿಯ ಜೀವನವು ಇತರ ಯಾವ ರಂಗದಲ್ಲಿ ಅಭಿವೃದ್ಧಿ ಹೊಂದಿದ್ದರೂ ಕೂಡ ಆ ಉತ್ಕರ್ಷ, ಅಭಿವೃದ್ಧಿ ಅಪರಿಪೂರ್ಣವೆಂದು ಎಲ್ಲರೂ ನಂಬುತ್ತಾರೆ. ಶ್ರೀ ಪುಂಡಲೀಕ ಶೆಣೈಯವರಿಗೆ ಅವರ ಕುಟುಂಬದವರು ಗೋವಾಕ್ಕೆ ಕುಟುಂಬ ಯಾತ್ರೆ ಹೋಗುವ ಸಂದರ್ಭದಲ್ಲಿ ಅವರನ್ನು ಕೂಡಾ ಬರಬೇಕೆಂದು ಒತ್ತಾಯಿಸಿದ ಒಂದು ಘಟನೆ ನೆನಪಿಗೆ ಬರುತ್ತದೆ. ಈ ಬಗ್ಗೆ ಆಹ್ವಾನ ಬಂದಾಗ ಶ್ರೀ ಪುಂಡಲೀಕ ಶೆಣೈಯವರು ನಾನು ಈ ಪ್ರವಾಸದ ಉದ್ದಿಶ್ಯ ಹೊರಗೆ ಇರಬೇಕಾದರೆ ಅಷ್ಟು ದಿನಗಳ ಮಟ್ಟಿಗೆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವವರು ಯಾರು? ಅದನ್ನು ಎಣಿಸಿದರೆ ನನ್ನ ಮನಸ್ಸಿಗೆ ತುಂಬಾ ಸಂಕಟವಾಗುತ್ತದೆ. ತವಕದಿಂದ ಇರುವ ಆ ಅತ್ಯನೇಕ ವಿದ್ಯಾರ್ಥಿಗಳಿಗೂ ಕೂಡಾ ನನ್ನ ಗೈರುಹಾಜರಿ ಅಪ್ರಿಯವೆನಿಸಬಹುದು. ನನ್ನ ಜೀವನದಲ್ಲಿ ನನ್ನ ಕುಲದೇವತೆಯಾದ ಶಾಂತಾದುರ್ಗೆಯ ದರ್ಶನವನ್ನು ಮಾಡಲು ನಾನು ಉತ್ಸುಕನಿದ್ದೇನೆ. ಆದರೆ ಈಗ ಆಗೋಲ್ಲ. ಇನ್ನೊಂದು ಬಾರಿ 'ಟ್ಯೂಶನ್'ಗೆ ಸೂಕ್ತ ವ್ಯವಸ್ಥೆಯನ್ನು ಮಾಡಿ ಮುಂಚಿತವಾಗಿ ತಿಳಿಸಿದ್ದಲ್ಲಿ ಆವಾಗ ಬರಲು ಪ್ರಯತ್ನಿಸುತ್ತೇನೆಂದು ಹೇಳಿದರು. ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸಿಕೊಡುವುದೇ ಕುಲಸ್ವಾಮಿನಿಯ ಆರಾಧನೆ ಎಂದು ಅವರ ಅಭಿಪ್ರಾಯ.

ಆದರೆ ಮತ್ತೆ ಅವರಿಗೆ ಅವರ ಕೊನೆಯುಸಿರಿನ ತನಕ ಕುಲದೇವರ ಯಾತ್ರೆಗೆ ಹೋಗುವ ಅವಕಾಶ ಸಿಗಲಿಲ್ಲ. ಆದರೆ ವಿದ್ಯೆ ಕಲಿಸುವುದೇ ಒಂದು ಆರಾಧನೆ ಯೆಂದು ಅವರು ತಿಳಿದದ್ದಕ್ಕೆ ಆ ಕುಲಸ್ವಾಮಿನಿ ಅಸ್ತು ಹೇಳಿದ ಒಂದು ಚಿಕ್ಕ ಘಟನೆ ಮುಂದೆ ನಡೆಯಿತು. ಅವರ ದೇಹಾಂತ್ಯದ ನಂತರ ಅವರ ಶ್ರಾದ್ಧಾದಿ ಕರ್ಮಾಂಗ ಗಳನ್ನು ಗೋಕರ್ಣದ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಾನದಲ್ಲಿ ಅವರ ಕುಟುಂಬದ ಕಿರಿಯರು ಕೋಟಿ ತೀರ್ಥದ ಬಳಿ ನಡೆಸಿದರು. ಆದರೆ ಸಪಿಂಡೀಕರಣ ಶ್ರಾದ್ಧದ ದಿನ (ಹನ್ನೆರಡನೆಯ ದಿನ) ಏಕಾದಶಿಯಾಗಿದ್ದುದರಿಂದ ಆವಾಗ ಶ್ರಾದ್ಧಾದಿ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಗದಿದ್ದ ಕಾರಣದಿಂದ ಶ್ರಾದ್ಧವನ್ನು ಮಾಡುವ ಉತ್ತರಾಧಿಕಾರಿಯವರಿಗೆ ಒಂದು ದಿನ ಬಿಡುವು ಸಿಕ್ಕಿತು. ಹಾಗಾಗಿ ಒಂದು ಆಲೋಚನೆ ಹೊಳೆದು ಆ ದಿನ ಕವಳೆಯಲ್ಲಿರುವ ಜೋಗಪ್ಪ ಶೆಣೈಯವರ ಕುಟುಂಬದ ಕುಲಸ್ವಾಮಿನಿ ಶ್ರೀ ಶಾಂತಾದುರ್ಗಾ ದೇವಿಯ

Sri Vidyabharathi Book Centre, Sringeri

CC-O. In Public Domain. Digitized by eGangotri
ದರ್ಶನವನ್ನು ಪಡೆದು ದಿವಂಗತರಾದ ಪುಂಡಲೀಕ ಶೆಣೈಯವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥನೆ ಮಾಡಲೋಸುಗ ಗೋವಾಕ್ಕೆ ಹೋಗುವ ಸಂಕಲ್ಪವು ಉದ್ಭವವಾಯಿತು. ಶ್ರಾದ್ಧಾದಿ ಕಾರ್ಯವನ್ನು ಮಾಡಲು ಆರಂಭಿಸಿದ ಬಳಿಕ ಕರ್ತೃವು ಶ್ರಾದ್ಧದ ಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ಹೋಗುವುದು ನಿಷಿದ್ಧವಾಗಿದ್ದರೂ ಪುಂಡಲೀಕ ಶೆಣೈಯವರಿಗೆ ತಮ್ಮ ಕುಲಸ್ವಾಮಿನಿಯ ಆಶೀರ್ವಾದ ಸಿಗಬೇಕು ಮತ್ತು ಅಲ್ಲಿಂದ ಪ್ರಾರ್ಥನೆ ಮಾಡಿಕೊಂಡು ಮಂತ್ರಾಕ್ಷತೆ ಮತ್ತು ಕುಂಕುಮಾದಿ ಪ್ರಸಾದಗಳನ್ನು ತಂದು ಪುಂಡಲೀಕ ಶೆಣೈಯವರ ಪಿಂಡದ ಮೇಲೆ ಶ್ರದ್ಧಾಪೂರ್ವಕವಾಗಿ ಸಮರ್ಪಣೆ ಮಾಡಬೇಕು ಎಂದು ಹಂಬಲಿಸಿ ಪುರೋಹಿತರ ವಿಶೇಷ ರೂಪದ ಪರವಾನಿಗೆಯನ್ನೂ ಕ್ಷೇತ್ರದ ಅಧಿದೇವತೆಯಾದ ಶ್ರೀ ಗೋಕರ್ಣ ಮಹಾಬಲೇಶ್ವರ ದೇವರ ಆಶೀರ್ವಾದವನ್ನೂ ಶಿರದಲ್ಲಿ ಹೊತ್ತು ಗೋಕರ್ಣದಿಂದ ಗೋವಾಕ್ಕೆ ಹೋಗಿ ಶ್ರೀ ಕುಲಸ್ವಾಮಿನಿಯಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ಪ್ರಸಾದವನ್ನು ತರಲಾಯಿತು. ಗೋವಾಕ್ಕೆ ಹೋದ ಕುಟುಂಬದ ಎಲ್ಲ ವ್ಯಕ್ತಿಗಳೂ ಶ್ರೀ ಶಾಂತಾದುರ್ಗಾ ದೇವಿಯಲ್ಲಿ – ಶ್ರೀ ಪುಂಡಲೀಕ ಶೆಣೈಯವರು ಜೀವನದುದ್ದಕ್ಕೂ ಬ್ರಹ್ಮಚರ್ಯ ವ್ರತವನ್ನು ಪಾಲಿಸಿ, ಯಾವ ಫಲಾಪೇಕ್ಷೆಯೂ ಇಲ್ಲದೆ, ವಿದ್ಯಾರ್ಥಿಗಳ ಸೇವೆ, ವಿದ್ಯಾದಾನ ಇತ್ಯಾದಿಗಳಲ್ಲಿ ತೊಡಗಿಸಿಕೊಂಡು ಕೃತಾರ್ಥರಾದ ಪುಣ್ಯಾತ್ಮರು. ಅವರಿಗೆ ಒಂದು ದಿನವಾದರೂ ಕುಲಸ್ವಾಮಿನಿಯ ದರ್ಶನಕ್ಕೆ ಬರಲಾಗಲಿಲ್ಲ. ಆದರಿಂದ ಉಂಟಾಗಿರಬಹುದಾದ ಯಾವತ್ತೂ ನ್ಯೂನತೆಯನ್ನು ಕ್ಷಮಿಸಿ ಆ ಆತ್ಮವು ಚಿರಂತನ ಶಾಂತಿಯನ್ನು ಅನುಭವಿಸುವಂತೆ ಆಶೀರ್ವದಿಸಬೇಕೆಂದು ಎಲ್ಲರೂ ಪುರೋಹಿತರ ಮೂಲಕ ಪ್ರಾರ್ಥನೆಯನ್ನು ಮಾಡಿದರು. ಪ್ರಾರ್ಥನೆಯ ಸಮಯ ಶ್ರೀ ಶಾಂತಾದುರ್ಗಾ ದೇವಿಗೆ ಅಲಂಕರಿಸಿದ ಗುಲಾಬಿ ಪುಷ್ಪವೊಂದು ಕೆಳಗೆ ಬಿದ್ದು ಆ ಆತ್ಮಕ್ಕೆ ತನ್ನ ಅನುಗ್ರಹವಿದೆ ಎಂದು ಅವಳು ಸೂಚಿಸಿದ ಘಟನೆಯನ್ನು ನೆನಪಿಸಿಕೊಂಡರೆ ಕುಲದೇವಸ್ಥಾನಕ್ಕೆ ಹೋಗಿ ಕುಲದೇವಿಯ ದರ್ಶನ ಪಡೆಯದಿದ್ದುದರಿಂದ ಆಗಬಹುದಾದ ಯಾವ ನ್ಯೂನತೆಯಾಗಲಿ, ದೋಷವಾಗಲಿ ಅವರಿಗೆ ಒದಗಲಿಲ್ಲವೆಂದು ಅರ್ಥವಾಗುತ್ತದೆ.

ಜೀವನದಲ್ಲಿ ಆಧ್ಯಾತ್ಮಿಕ ಮತ್ತು ಧಾರ್ಮಿಕ ತತ್ವಗಳು ಸಮ್ಮಿಳಿತವಾಗಿರಬೇಕು. ಆವಾಗಲೇ ನಮಗೆ ಅಭಿವೃದ್ಧಿ ಸಾಧ್ಯ ಎಂದೂ ಹೇಳುವ ಆಸ್ತಿಕ ಮಹಾಶಯರಲ್ಲಿ ಪುಂಡಲೀಕ ಶೆಣೈಯವರು ಒಬ್ಬರು. ತಾವು ಬರೆದಿರುವ – 'Religious Education for Hindu Children' ಎಂಬ ಲೇಖನದಲ್ಲಿ ಈ ವಿಷಯವನ್ನು ಮನೋಹರವಾಗಿ ಈ ರೀತಿ ತಿಳಿಸಿದ್ದಾರೆ. "Modern scientific knowledge

Sri Vidyabharathi Book Centre, Sringeri

CC-O. In Public Domain. Digitized by eGangotri

and idea of democracy have naturally brought about many changes in our modern society. So our youth of the present day cannot escape modernisation. But modernisation need not and cannot refuse to recognize the importance of and to acquire moral and spiritual values of life. These are essential principles for which India has stood in the past through the ages and that material riches without the moral and spiritual values may well turn to dust and ashes. These values should be understood by the youth; when they are in schools and colleges. Therefore there should be some sort of moral and religious education given to them."

ಬ್ರಹ್ಮಚರ್ಯ ವ್ರತ ಪರಿಪಾಲನೆ

ಶುದ್ಧ ಹಾಗೂ ಸಾತ್ವಿಕ ಸಸ್ಯಾಹಾರ - ವಿಹಾರ, ಸದಾಚಾರ-ಸದ್ವಿಚಾರಗಳಿಂದ ತಮ್ಮ ಮನಸ್ಸನ್ನೂ ದೇಹವನ್ನೂ, ಸದಾ ಸರ್ವಕಾಲ ಆರೋಗ್ಯಕರವಾಗಿ ಅವರು ಇಟ್ಟಿದ್ದರು. ವೀಳ್ಯದೆಲೆ, ತಂಬಾಕು ಸೇವನೆ, ಮದ್ಯಪಾನ ಇಂಥ ಯಾವ ಅಭ್ಯಾಸ/ದುರ್ವ್ಯಸನಗಳಿಗೂ ಅವರು ಎಂದೂ ಶರಣಾಗಲಿಲ್ಲ. ಮದುವೆ ಮಾಡಿಕೊಳ್ಳುವ ಪ್ರಾಯದಲ್ಲಿ ಕುಟುಂಬದ ಹಿರಿಯರು ಮಾಡಿದ ಒತ್ತಾಯಕ್ಕೆ ಯಾವತ್ತೂ ಮಣಿಯದೆ ತನ್ನ ಕೊನೆಯ ಉಸಿರಿರುವ ತನಕ ಬ್ರಹ್ಮಚರ್ಯ ಪರಾಯಣ ರಾಗಿದ್ದರು. ಮದುವೆ ಮಾಡಿಕೊಂಡಲ್ಲಿ ತನ್ನ ಮನಸ್ಸನ್ನು ಮಡದಿ ಮಕ್ಕಳಿಗಾಗಿ ಹಂಚಿಕೊಡುವ ಸಂದರ್ಭ ಬಂದಲ್ಲಿ ಎಲ್ಲಿ ವಿದ್ಯಾರ್ಥಿಗಳಿಗೆ, ವಿದ್ಯಾಭ್ಯಾಸಕ್ಕೆ ತೊಡಕು ಬರುವುದೋ ಎಂಬ ಭೀತಿ ಅವರ ಮನಸ್ಸನ್ನು ಆವರಿಸಿ ಕೊಂಡಿದ್ದಿರಬೇಕು. ವಿದ್ಯಾದಾನವು ಒಂದು ಮಹಾ ಯಜ್ಞ, ಅದನ್ನು ನೆರವೇರಿಸ ಬೇಕಾದರೆ ಹೆಂಡತಿ, ಮಕ್ಕಳು ಒಂದು ತಡೆಯಾಗಿ ನಿಲ್ಲಬಹುದು ಎಂಬ ಭಾವನೆಯಿಂದ ಮದುವೆ ಯಾಗದೆ ಉಳಿದಿದ್ದರೂ ಕೂಡಾ ತನ್ನ ಕೊನೆಯ ಕಾಲದಲ್ಲಿ ಆಸ್ಪತ್ರೆಯನ್ನೂ ಸೇರದೆ, ಯಾರಿಗೂ ಹೊರೆಯಾಗದೆ, ಯಾರನ್ನೂ ಯಾವ ಹಂಗಿಗೂ ಹಾಕದೆ ಯಾವ ಆಯಾಸವೂ ಇಲ್ಲದೆ ತನ್ನ ಮಾಗಿದ ಎಂಭತ್ತನೇ ಹರೆಯದಲ್ಲಿ ಹೃದಯ ಸ್ತಂಭನದಿಂದ ಲೀಲಾಜಾಲವಾಗಿ ಮರಣವನ್ನಪ್ಪಿದರು. ಇದು ಆ ತಪಸ್ವಿಗೆ ತಾಪಸೋತ್ತಮನಾದ ಭಗವಂತನು ಕೊಟ್ಟ ವರವಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಶರೀರವು ನಶ್ವರವಾದರೂ ಆತ್ಮ ಶಾಶ್ವತ"

ದಿವಂಗತ ಯು. ಪುಂಡಲೀಕ ಶೆಣೈಯವರ ಪಾರ್ಥಿವ ಶರೀರದ ಕೊನೆಯ ದೃಶ್ಯ. ಶವಸಂಸ್ಕಾರಕ್ಕೆ ಮೊದಲು ಗಂಗಾಸ್ನಾನಾದಿಗಳನ್ನು ಮಾಡಿಸುತ್ತಿರುವ ದಿ| ಯು. ಪಾಂಡುರಂಗ ವಾಸುದೇವ ಶೆಣೈ (ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್‌ನ ಸಂಸ್ಥಾಪಕರು) ಬಲಗಡೆ ಕುಳಿತವರು : ದಿ| ಯು. ಉಮಾನಾಥ ಶೆಣೈಯವರು ಇತರರೊಂದಿಗೆ.

Sri Vidyabharathi Book Centre, Sringeri

‘‘ಕಲಿತು ಕಲಿಸುವ ಕರ್ತವ್ಯದಲ್ಲಿ ನಿರತರಾಗಿ ತಮ್ಮ ದೇಹವನ್ನು ಕರಗಿಸಿಕೊಂಡವರು’’

CC-O. In Public Domain. Digitized by eGangotri



Sri Vidyabharathi Book Centre, Sringeri.

ನೆನಪಿನಾಳಕ್ಕಿಳಿದ ದಿವಂಗತ ಯು. ಪುಂಡಲೀಕ ಶೆಣೈಯವರು ಚಿರನಿದ್ರೆಯಲ್ಲಿ ವಿರಮಿಸುತ್ತಿರುವುದು.

CC-O. In Public Domain. Digitized by eGangotri

ದಿವಂಗತ ಶ್ರೀ ಪುಂಡಲೀಕ ಶೆಣ್ಯೈ ಮೆಮೋರಿಯಲ್ ಟ್ರಸ್ಟ್

ಭೂಮಿಯ ಮೇಲೆ ತನ್ನ ಋಣ ಮುಗಿದರೂ ಕೂಡಾ ಜನರು ವಿದ್ಯಾವಂತರಾಗಿರಬೇಕು. ವಿದ್ಯೆ ಕಲಿಯುವವರಿಗೆ ಎಲ್ಲಾ ಕಡೆಯಿಂದ ಉತ್ತೇಜನ, ಪ್ರೋತ್ಸಾಹ ಇತ್ಯಾದಿ ಸಿಗಬೇಕು ಎಂಬ ಮಹದಾಸೆಯನ್ನು ಇಟ್ಟುಕೊಂಡ ಅವರು ತನ್ನ ಮರಣಾನಂತರವೂ ತಾನು ಸಂಪಾದನೆ ಮಾಡಿ ಇಟ್ಟ ಧನವನ್ನು ಯೋಗ್ಯ ರೀತಿಯಲ್ಲಿ ಈ ವಿಷಯಗಳಿಗೆ ವಿನಿಯೋಗವಾಗಬೇಕೆಂದೂ ಆಶಿಸಿದ್ದರು. Sri U. Pundalik Shenoy Memorial Trust, ಅವರ ಆಶಯವನ್ನು ಈಡೇರಿಸುವುದಕ್ಕೋಸ್ಕರ ಅವರ ಕುಟುಂಬದ ಅತೀ ಸಮೀಪದ ಬಂಧು ದಿವಂಗತ ಪಾಂಡುರಂಗ ವಿ. ಶೆಣ್ಯೈಯವರು ಸ್ಥಾಪಿಸಿದ್ದು ಅವರ ನಂತರ ಅವರ ಮಕ್ಕಳು, ಸಂಬಂಧಿಕರು ಮತ್ತು ಅಭಿಮಾನಿಗಳು ಮುಂದುವರಿಸಿಕೊಂಡು ಹೋಗುತ್ತಿದ್ದು ದಿ। ಪುಂಡಲೀಕ ಶೆಣ್ಯೈಯವರ ಪುಣ್ಯ ಸ್ಮರಣೆಯನ್ನು ಮಾಡಿಕೊಡುತ್ತಾ ಇದೆ.

ಇವರಂತಹ ವ್ಯಕ್ತಿ ಇನ್ನಿಲ್ಲ

ಇಂಗ್ಲಿಷ್‌ನಲ್ಲಿ ಒಂದು ಉಕ್ತಿ ಇದೆ. ಅದು W. A. Wartರ ನುಡಿ. ಅದು ಈ ರೀತಿ ಇದೆ.

The Mediocre teacher tells,
The Good teacher explains,
The Superior teacher demonstrates,
The Great Teacher Inspires.

ಪುಂಡಲೀಕ ಶೆಣ್ಯೈಯವರು ವಿದ್ಯೆಯ ಬಗ್ಗೆ ಸದಾ ಸರ್ವದಾ ಸ್ಫೂರ್ತಿಯನ್ನು ಹುಟ್ಟಿಸಿದ, ಹುಟ್ಟಿಸುವ ಮತ್ತು ಹುಟ್ಟಿಸುತ್ತಿರುವ ಮಹಾನ್ ಉಪಾಧ್ಯಾಯರು ಮತ್ತು ವಿದ್ಯಾದೇವತೆಯ ಮಹೋನ್ನತ ಆರಾಧಕರು. (The Great Teacher)

ದಿವಂಗತ ಪ್ರೊ। ಕೆ. ಎಸ್. ಹರಿದಾಸ ಭಟ್ಟರು ತಮ್ಮ ಲೇಖನದಲ್ಲಿ ಶ್ರೀ ಪುಂಡಲೀಕ ಶೆಣ್ಯೈಯವರನ್ನು ಮುಕ್ತಕಂಠದಲ್ಲಿ ಕೊಂಡಾಡುತ್ತಾ, ಘಂಟಾಘೋಷವಾಗಿ ಹೇಳಿದ್ದಾರೆ. – ''ಪುಂಡಲೀಕ ಶೆಣ್ಯೈ ಇನ್ನಿಲ್ಲ; ಅಂಥವರು ಮುನ್ನಿರಲಿಲ್ಲ. ಇನ್ನು ಬರುವುದೂ ಇಲ್ಲ.''

ಈ ಮಾತು ವಿಸ್ತಾರವಾದ ಹಗಲಿನ ಬೆಳಕಿನಷ್ಟೆ ಸತ್ಯ.

●

Sri Vidyabharathi Book Centre, Sringeri

CC-O. In Public Domain. Digitized by eGangotri

Education

–Wise Sayings

"It is essential that a student acquire an understanding of and lovely feeling for values. He must acquire a vivid sense of the beautiful and of the morally good. Otherwise, he, with his specialised knowledge more closely resembles a well-trained dog than a harmoniously developed person."

Explanation : There is no substitute for a sense of values. A sense of values will help you to find happiness within yourself and enjoy the most ordinary things which we often pass by. Therefore Education is awareness of this sense of values.

– Einstein

* * *

Education is the ability to listen to almost anything without losing your temper and or your self-confidence.

– Robert Frost

* * *

Education makes a people easy to lead, but difficult to drive; easy to govern, but impossible to enslave.

– Lord Brougham

* * *

Sri Vidyabharathi Book Centre, Sringeri

CC-O. In Public Domain. Digitized by eGangotri

Education leads you to Knowledge,
Knowledge leads you to Reflection,
Reflection leads you to Conviction,
Conviction leads to sense of Obligation,
Obligation leads you to Responsibility,
Responsibility leads you to a sense of Duty,
Sense of Duty leads you to Achievements,
And Achievement leads you to Peace of Mind,
If you and I lead this life in full,
What shall I say, about PEACE in the world ?

– Fr. Zacharias

* * *

Education is not given for the purpose of earning a living. It is learning what to do with a living after you have earned it.

– Abraham Lincoln

* * *

The finest fruit of serious learning should be the ability to speak the word – GOD without reserve and embarrassment.

– Nathan Pusey

* * *

True Education means learning to look at things through the eyes of God.
'One drop of water is in the sacred Jamuna,
Another is foul in the ditch by the roadside,
But when they fall into the Ganga,
Both alike become Holy' – *(Surdas)*

– Swami Ram Teertha

●

Sri Vidyabharathi Book Centre, Sringeri

CC-O. In Public Domain. Digitized by eGangotri

Late Sri U. Pundalik Shenoy

– **Sri M. M. Kini**
B.A., B.Com., LL.B., CAIIB, A.C.I.B. (London)
Bangalore

Tears and smiles make the music of life thus says an old adage nay it is the practical truth for all so long as this earth exists in the planet of this universe. If America the largest Nation among all the countries has enjoyed the leadership of its noblest president late Abraham Lincoln who made a hairsplitting statement.

"With malice towards none and with charity and kindness towards the right as God gives us to see the light" and if India had the leadership of our President (1962-1967) Dr. and Professor Sarvapalli Radhakrishnan and education is considered to be the noblest profession, the teaching community in general are to be held in the highest esteem in this world.

Among the teachers late Sri Udupi Pundalik Shenoy should be ranked number one for centuries in India.

This is a shortest autobiography of my life and with 45 years of nostalgic memories, every second of every minute of every hour of every day of every week of every month of every year for all the remaining tenure till the end the body blood-bones and 12 billion cells of the brain have been vibrating and reverberating with the masterly voice of this saintly guru Sri Pundalik Shenoy. With the economics of Rs. 8/- salary again as an elementary school teacher, my father could not manage any school education to me and hence I became a Bus-Conductor – Hotel Attendant-Peon in Canara Mutual Co-table cleaner in MGM College Canteen/ Hostel and a supplier in the Lashangrila of Manipal.

Inscrutable are the ways of that omnipotent Almighty God.

Sri Vidyabharathi Book Centre, Sringeri

CC-O. In Public Domain. Digitized by eGangotri

The principal Sri Kushi Haridas Bhat made a reference to Sri Pundalik Shenoy about my pathetic condition and thereupon he was emotionally moved and sympathetically decided to start an evening school at Paniyadi near Sode Mutt to accommodate honest/intelligent/poor youngsters. He sought the honorary services of Sri Subraya Bhat of Christian High School as well as Sri Parkal Ranganatha Shenoy as his assistants. The Paniyadi School owned by Sri Sode Mutt spontaneously agreed for leasing out the classrooms with Norent/deposit and thereby everything became free. About 75 students of my category were enrolled as Sri Pundalik Shenoy had by then secured comprehensive details from the University of Madras for their academic certificate of matriculation. It was such a formidable course that pupil like me who had already crossed seventeen with no background of any school entry could never imagine complying with the conditions (a) All 8 papers should be cleared in one single attempt (b) Minimum age required was 20 years (c) Except Kannada all the 7 papers were in English (d) The English text/Non-detail etc., were so tough that the course was comparable to MA English Literature. (e) Minimum pass marks 50%.

Earn while you learn with nothing to spend on earning. Having perceived normal intelligence/dedication to duty and burning desire to overcome that abject poverty of no roof over the head to sleep and age old second hand and torn shirts/trousers, Sri Shenoymam became my father for everything and he provided a shelter to me in his small house on the Sode Mutt Road.

Needless to say that the books were all provided at his own cost and I still remember that tight cap on his head with an umbrella in his left arm walking miles together when thousands of pranams – were poured on his feet. He was an embodiment of all possible qualities of life including charity,

Sri Vidyabharathi Book Centre, Sringeri

CC-O. In Public Domain. Digitized by eGangotri
kindness, selflessness, politeness with serenity in all his dispositions. Amazingly enough to sacrifice everything in life, he had sacrificed even the marital life and remained a perfect bachelor throughout till the last day on 21-12-1976 a saga of eight decades out of which all these 43 years the whole of my body is prostrating with just remembering my Godfather Shenoymam. Manipal High School to Christian High school, there were thousands who were the beneficiaries of the most brilliant brain of Sri Pundalik Shenoy. It was not merely student-teacher relationship but all in one (a) staying with him for me alone. (b) Morning hot water bath for which he would draw cold water from that deep well/cut the fire wood/light/fire under the copper pot of 100 litres (c). He would quiety walk across the narrow lane leading to Tenkapet and bring for me 2 Idlis and a coffee so that the breakfast was complete with not even a single pie with me to be paid to New Taj Mahal Hotel. Whatever paltry salary of Rs. 12/- per month from MGM College canteen was entirely going to my parents who had to feed 5 sons and a daughter with Rs. 3/- rent to a small hutment in Kunjibettu.

Next came the topic of hall-ticket after 3 years of rigorous training/lectures/tuition in his house till midnight and the examination fee/Travelling to the nearest Centre called Government Branan College, Tellichery. The amount comes to Rs. 275/- in all and that was his privilege to spend because I was still the same penniless student under his shelter as an adopted son. One day he took me to Sri T. A. Pai in Mukand Nivas for proposing a peon's post to me in Syndicate Bank and with the best of intentions Paimam blessed me that I will be able to bring a name to this Guru Sri Pundalik Shenoy by earning exceptionally outstanding Laurels and that happend. I was declared I class with 98% in the Mathematics group. As a roadside hotel worker with a weak brain I made a beginning and scaled the highest peak

Sri Vidyabharathi Book Centre, Sringeri

CC-O. In Public Domain. Digitized by eGangotri

of qualifications in my life, thanks to Sri Pundalik Shenoy alone.

He was very closely connected with Dr. T.M.A. Pai who has produced an Empire of Education never seen by the world and Manipal became a worldwide name. Shri Shenoy mam was a teacher for several of Tonse Pai family members and now the senior most among them. Shri T. Ramesh Pai occupies the most prestigious status in our society thanks to Shenoy's benedictions on the entire unit of Educationists and Financial wizards. During those days I was so sure that there could be no teacher of Shenoymam's competence of injecting the lessons into the brain with irrevocable impregnation and easiest method of recalling when the questions in the examination hall warrant that split second memory. After my victory in the matriculation Sri Pundalik Shenoy was jubilant and by then I had already imagined myself to be the highest qualified man for a Bank. He taught me one more truth of human life. **Inspiration without perspiration remains only aspiration. Perspiration without inspiration becomes a desperation.** Ambition should be always matched with the achievements. He talks to Shri C. E. Kamath the then Chief Executive of Canara Bank and thereby I became an apprentice typist for Rs. 60/- per month. I had prostrated before him even in the roads of Udupi and by the time his end came I was already a Branch Manager of Canara Bank. I had the telepathy and intuition that Sri Shenoy while breathing his last on 21/12/1976 would have certainly felt that sense of deep-rooted gratitute and hence I scaled new heights in Canara Bank which became second to none in India among the Nationalised Banks. Rs. 60/- became Rs. 25,000/- when I was an Executive with all amenities/perks/vehicle with Driver, comprehensive free medical facilities etc., all inclusive Rs. 45,000/- p.m.

Sri Vidyabharathi Book Centre, Sringeri

CC-O. In Public Domain. Digitized by eGangotri

Last but not the least with the art of teaching digested by my blood cells I could command standing ovations from thousands of affluent class of audience in USA. I was adjudged to be the best speaker in Canara Bank where I had the privilege of teaching in the training college for nearly a decade. Though the above words have hardly any meaning I am incapable of indicting any further as I am down with a litre of tears and vibrations in this strong body to indicate endless benedictions I had from this great soul of Sri Pundalik Shenoy. If Gurubrahma Guru Vishnu Guru Devo Maheshwara is not to be recited in a casual manner I feel Sri Pundalik Shenoy alone stands the test of this text.

Though he was not fond of visiting temples his deeds were all concluding towards "Good is no good when better is expected-Better is no Better where best is expected - Best is no best where superior is expected – superior is no superior when excellent is expected-Excellent is not at all excellent when exceptionally outstanding achievement is expected."

This is the message of stanza 10 of chapter 7 of Bhagavadgita of Lord Sri Krishna, whom I was visiting daily with my heartful of emotional feelings to be submitted to God to bless the soul of Pundalik Shenoy so that the teaching community in general may emulate his exemplary contribution to the people below the proverty line like me.

I remain ever indebted and can never repay his debt as he has left this world and therefore I remember him daily till I leave this world.

Sri Vidyabharathi Book Centre, Sringeri

CC-O. In Public Domain. Digitized by eGangotri

Late Sri U. Pundalik Shenoy, B.A.L.T. – Father of Education

– **Sri U. G. Shenoy,** Udupi

He was a great man in educational field being an expert in Maths and English grammar. He was the senior citizen of the Temple city of Udupi Town, being the fifth son of late Sri U. Jogappa Shenoy of Udupi with five brothers and three sisters. He was considered to be a man of discipline, determination and sound judgement. He dedicated his entire life for the service and cause of education. He was a graduate of Madras University. He was considered an authority for English grammar and was called Grammarian-equally in Maths too. He wrote many books in English jointly with late Sri Narayan Rao, Phd. (Ex-Principal of P.P. College of Udupi), got printed the books and made available for the benefit of the public. He was philanthropist, most disciplined teacher and he expected his students to be disciplined too. He worked for the Christian High School of Udupi till his age of 55 years as Asst. Head Master. During his tenure because of his discipline and good-teaching, the High School earned all-round name and fame as the best High School. He built-up an Old Boys Association, travelled all-round for enrolling his past students and collecting membership funds for the cause of education. He started certain schemes such as scholarships to merited students and free education to needed poor class of people. By his strenuous efforts he started for the High School Annual Day celebrations, gatherings of Old Boys Association members and conducting sports activities besides conducting dramas during Annual Day celebration under his stewardship and direction. He got voluntary retirement at the age of 55 and joined as Head Master of Manipal High School, Manipal and for five years upto 60 years, he brought up this High School. After his retirement from Manipal

Sri Vidyabharathi Book Centre, Sringeri

CC-O. In Public Domain. Digitized by eGangotri

High School, he started 'FREE-TUITION SHIBIRA' at his residence – from 8-00 a.m. in the morning to 7.00 p.m. in the evening including Sundays. In this Shibira, no tuition fees and consideration of any sort was accepted. To cite an instance, one lady student got tuition at this Shibira and got herself passed with rank. Student's father sent through the student for her teacher a pack of one kilo grapes in memory of his efforts. He refused to accept, when the student began to weep. Seeing this scene, the teacher not to make her weeping, opened the pack and one single grape he tasted and returned the remaining pack to the student. But the student continued her weeping, then he expressed that the pack is given by him for distribution to her colleagues. She then returned as helpless. Such is the late Shenoy's integrity. There are several such instances and most of the old generation knows well for themselves. He led a pucca Gandhian way of living. He used to wear Khadi Dhothi, Khadi Shirt and Khadi Coat with Khadi Topi (Cap). No other dress. He was very very simple in living. If anybody comes to him for any monetary help – particularly for educational fees or books, he never allowed them to return bare-handed, he used to help such persons always.

He was generaly in aquaintance with great and good people like late Dr. U. Sunder Ram Pai, Dr. T. M. A. Pai, Sri Upendra Pai, Sri T. A. Pai and other Pai Bhandhus. There is a practice in Udupi Town to honour once every year on the first day of New Year such persons who are dedicated to public service in any field. Mr. Shenoy was once honoured by Pai Bhandhus for his life-time service in Educational field, when he expressed before the gathering by saying that though while teaching he was a Teacher, he was always a student. Every person in whatever capacity in life is a student as he has to learn a lot from the world at every stage of his life. Therefore he is a student and will continue to be a student till he breathes his last.

Lastly he was considered 'BHISHMA' of Mahabharath.

Sri Vidyabharathi Book Centre, Sringeri

CC-O. In Public Domain. Digitized by eGangotri

